ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ನವೆಂಬರ್ 17, 2021

ಸಂಪುಟ : 48 ಸಂಚಿಕೆ : 186 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com



## ದೇವನಗರಿಯಲ್ಲಿ ತುಳಸಿ ವಿವಾಹ ಸಂಭ್ರಮ

ದಾವಣಗೆರೆ, ನ.16- ನಗರದಲ್ಲಿ ತುಳಸಿ ಹಬ್ಬವನ್ನು ಮಂಗಳವಾರ ಶ್ರದ್ಧಾ-ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಕೆಲವು ಮನೆಗಳಲ್ಲಿ ಸೋಮವಾರವೂ ಹಬ್ಬ ಆಚರಿಸಲಾಗಿತ್ತು.

ಮಹಿಳೆಯರು ರಂಗೋಲಿ, ಹೂವು, ಮಾವಿನ ಎಲೆಗಳಿಂದ ಹಾಗೂ ದೀಪಗಳಿಂದ ತುಳಸಿ ಕಟ್ಟೆಯನ್ನು ಅಲಂಕರಿಸಿ ಭಕ್ತಿಯಿಂದ ಪೂಜಿಸಿದರು. ದೀಪಾವಳಿ ನಂತರ ಆಗಮಿಸುವ ತುಳಸಿ ಲಗ್ನದಂದು ಪ್ರತಿ ಮನೆಯಲ್ಲಿ ಸಂಭ್ರಮ ಮನೆ ಮಾಡಿತ್ತು.

ತುಳಸಿ ಪೂಜೆ ಮಾಡುವು ದರಿಂದ ಎಲ್ಲಾ ಕಷ್ಟಗಳು ಪರಿಹಾರವಾ ಗುತ್ತವೆ. ಪುಣ್ಯ ಪ್ರಾಪ್ತಿಯಾಗುತ್ತದೆ ಎಂಬ ಭಾವನೆ ಭಕ್ತರಲ್ಲಿದೆ.

ತುಳಸಿ ಗಿಡದೊಂದಿಗೆ ಬೆಟ್ಟದ ನೆಲ್ಲಿಕಾಯಿ ಗಿಡವನ್ನು ನೆಟ್ಟು, ವಿಷ್ಣುವಿನ ಅವತಾರ ಕೃಷ್ಣನ ಮೂರ್ತಿಯನ್ನು ಇಟ್ಟು ಪೂಜಿಸುವ ರೂಢಿಯೂ ಸಹ ಇದೆ. ತುಳಸಿ ಗಿಡದ ಸುತ್ತಲೂ ಮದುವೆ ಮಂಟಪ ನಿರ್ಮಿಸುತ್ತಾರೆ. ಇದಕ್ಕೆ ತುಳಸಿ ಬೃಂದಾವನವೆಂದು ಹೇಳಲಾಗುತ್ತದೆ.

ಹೆಂಗಳೆಯರು ತುಳಸಿ ಗಿಡವನ್ನು ಮದುವಣಗಿತ್ತಿಯಂತೆ ಸಿಂಗರಿಸುತ್ತಾರೆ. ವಿಷ್ಣುವಿನ ಅಥವಾ ಅವನ ಅವತಾರವಾದ ಕೃಷ್ಣ, ರಾಮನ ಫೋಟೋವನ್ನು ಇಲ್ಲವೇ ಸಾಲಿಗ್ರಾಮ ಕಲ್ಲನ್ನು ತುಳಸಿ ಗಿಡದ ಪಕ್ಕ ಇಟ್ಟು ಇಬ್ಬರನ್ನೂ ಸ್ನಾನ ಮಾಡಿಸಿ ಶುಭ್ರ ಬಟ್ಟೆ ತೊಡಿಸಿ ಹೂವು, ಹಣ್ಣುಗಳಿಂದ ಅಲಂಕರಿಸುತ್ತಾರೆ. ವಿಷ್ಣುವಿನ ಭಾವಚಿತ್ರ ಹಾಗೂ ತುಳಸಿ ಗಿಡಕ್ಕೆ ಹತ್ತಿಯಿಂದ ತಯಾರಿಸಿದ ಮಾಲೆಯನ್ನು ತೊಡಿಸಿ ಮದುವೆಯ ಶಾಸ್ತ್ರ ಮಾಡಲಾಗುತ್ತದೆ. ಹಿಂದೂ ವಿವಾಹ ಪದ್ಧತಿಯಲ್ಲಿ ನಡೆಯುವ ಆಚರಣೆಯಂತೆಯೇ ವಿಷ್ಣು-ತುಳಸಿ ವಿವಾಹವನ್ನು ಭಕ್ತರು ಆಚರಿಸುತ್ತಾರೆ.

ಮಂಗಳವಾರ ತುಳಸಿ ವಿವಾಹದ ಹಿನ್ನೆಲೆಯಲ್ಲಿ ಪೂಜಾ ಸಾಮಗ್ರಿ ಖರೀದಿಸಲು ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಮಾರುಕಟ್ಟೆಗೆ ಆಗಮಿಸಿದ್ದರು. ಬಾಳೆಗಿಡ, ನೆಲ್ಲಿ,-ಹುಣಸೆ ಟೊಂಗೆಗಳು, ಕಬ್ಬು, ಸೇವಂತಿ, ಚೆಂಡು ಹೂ ಹಾಗೂ ಸೇರಿದಂತೆ ವಿವಿಧ ತುಳಸಿ ಪೂಜಾ ಸಾಮಗ್ರಿಗಳನ್ನು ಖರೀದಿಸಿದರು.

# ಸಮರ್ಥರಿಗೆ ಅನ್ವೇಷಣೆ

## ವಿಪ: ನಾಮಪತ್ರ ಸಲ್ಲಿಕೆ ಆರಂಭವಾದರೂ ಅಭ್ಯರ್ಥಿಗಳು ಅಂತಿಮವಾಗಿಲ್ಲ

**ಹಿಂದೆ ಗೆದ್ದವರು, ಕಡಿಮೆ ಅಂತರದಲ್ಲಿ ಸೋತವರಿಗೆ ಬಿಜೆಪಿ ಮಣೆ**

**ಬಂಡವಾಳ ಶಾಹಿಗಳಿಗೆ ಟಿಕೆಟ್ ನೀಡಲು ಕಾಂಗ್ರೆಸ್ ಆಸಕ್ತಿ**

**ಪ್ರಾಬಲ್ಯವಿರುವ 5-7 ಕ್ಷೇತ್ರಗಳಲ್ಲಿ ಮಾತ್ರ ಜೆಡಿಎಸ್ ಸ್ಪರ್ಧೆ**

ಬೆಂಗಳೂರು, ನ. 16 - ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿನ 25 ಸ್ಥಾನಗಳ ಚುನಾವಣೆಗೆ ನಾಮಪತ್ರ ಸಲ್ಲಿಕೆ ಕಾರ್ಯ ಆರಂಭಗೊಂಡರೂ, ರಾಜಕೀಯ ಪಕ್ಷಗಳು ಮಾತ್ರ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿಲ್ಲ.

ಹೆಚ್ಚು ಸ್ಥಾನ ಗಳಿಸಬೇಕೆಂಬ ನಿಟ್ಟಿನಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳ ಅನ್ವೇಷಣೆಯಲ್ಲಿವೆ. ಆದರೆ ಯಾರನ್ನು ಕಣಕ್ಕಿಳಿಸಬೇಕೆಂದು ನಾಯಕರಲ್ಲಿ ಗೊಂದಲವುಂಟಾಗಿದೆ.

ಕಾರ್ಯಕರ್ತರನ್ನು ಕಣಕ್ಕಿಳಿಸುವುದರಿಂದ ಗೆಲುವು ಸುಲಭವಾಗುವುದಿಲ್ಲ. ಇತರೆ ಪಕ್ಷಗಳಿಗಿಂತ ಮತ ಪಡೆಯಲು ಸ್ಥಳೀಯವಾಗಿ ವರ್ಚಸ್ಸು ಮತ್ತು ಹಣ ಬಲವುಳ್ಳವರಿಗೆ ಟಿಕೆಟ್ ನೀಡಿದರೆ, ತಮ್ಮ ಅಭ್ಯರ್ಥಿ ವಿಧಾನ ಪರಿಷತ್ ಪ್ರವೇಶ ಸುಲಭವಾಗಲಿದೆ ಎಂಬ ಲೆಕ್ಕಾಚಾರದಲ್ಲಿ ಮೂರೂ ಪಕ್ಷಗಳು ನಿರತವಾಗಿವೆ.

ಬಿಜೆಪಿ ಮಾತ್ರ ಕಳೆದ ಚುನಾವಣೆಯಲ್ಲಿ ಆಯ್ಕೆಗೊಂಡವರಿಗೆ ಮತ್ತೆ ಟಿಕೆಟ್ ನೀಡುವುದು ಹಾಗೂ ಅಲ್ಪ ಅಂತರದಲ್ಲಿ ಸೋತವರಿಗೆ ಈ ಚುನಾವಣೆಯಲ್ಲೂ ಅವಕಾಶ ನೀಡುವ ಬಗ್ಗೆ ಚಿಂತನೆ ನಡೆಸಿದೆ.

ಕರಾವಳಿ ಮತ್ತು ಮಲೆನಾಡಿನಲ್ಲಿ ಪಕ್ಷದ ಕಾರ್ಯಕರ್ತರಿಗೆ ನೀಡಿದರೆ, ಉಳಿದೆಡೆ ಅಭ್ಯರ್ಥಿ ಆಯ್ಕೆ ಸಾಮರ್ಥ್ಯವನ್ನೇ ಮಾನದಂಡವಾಗಿಟ್ಟುಕೊಂಡು, ಆಯ್ಕೆ ಪ್ರಕ್ರಿಯೆ ನಡೆದಿದೆ. ಕಾಂಗ್ರೆಸ್ ಹೆಚ್ಚು ಸ್ಥಾನ ಗಳಿಸಿ, ಮುಂದಿನ ವಿಧಾನಸಭಾ ಚುನಾವಣೆಗೆ ವೇದಿಕೆ ಸಿದ್ಧಪಡಿಸಬೇಕೆಂಬ ತವಕದಲ್ಲಿದ್ದು, ಈ ಬಾರಿ ಬಂಡವಾಳ ಶಾಹಿಗಳಿಗೆ ಟಿಕೆಟ್ ನೀಡಲು ಹೆಚ್ಚು ಆಸಕ್ತಿ ತೋರಿದೆ.

ಅಷ್ಟೇ ಅಲ್ಲ, ಬಿಜೆಪಿ ಮತ್ತು ಜೆಡಿಎಸ್‌ನಿಂದ ಕೆಲವರನ್ನು ಸೆಳೆದು ಕಣಕ್ಕಿಳಿಸಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನಿರಂತರ ಪ್ರಯತ್ನದಲ್ಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಹಾಗೂ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ನಡುವೆ ಅಭ್ಯರ್ಥಿಗಳ ಆಯ್ಕೆಯಲ್ಲಿ ಮುಸುಕಿನ ಗುದ್ದಾಟವೂ ಕೇಳಿಬರುತ್ತಿದೆ. ಅಭ್ಯರ್ಥಿಗಳ ಆಯ್ಕೆಯಲ್ಲೂ ಮೇಲುಗೈ ಸಾಧಿಸಲು ಇವರಿಬ್ಬರೂ ಪ್ರಯತ್ನ ಮುಂದುವರೆಸಿದ್ದಾರೆ. ಕಳೆದ ಒಂದು ವಾರದಿಂದ ಜಿಲ್ಲಾವಾರು ಸಭೆ ನಡೆಸಿದರೂ, (2ನೇ ಪುಟಕ್ಕೆ)

## ಆಂಟಿವೈರಲ್ ಇಲ್ಲದೇ ಹೆಚ್‌ಐವಿ ಗುಣವಾದ ಎರಡನೇ ವ್ಯಕ್ತಿ ಪತ್ತೆ

ಬೋಸ್ಟನ್, ನ. 16 – ಆಂಟಿವೈರಲ್ ಔಷಧಿಗಳಿಲ್ಲದೇ ಕೊರೊನಾದಿಂದ ಗುಣವಾದ ವಿಶ್ವದ ಎರಡನೇ ಹೆಚ್.ಐ.ವಿ. ರೋಗಿಯನ್ನು ಗುರುತಿಸಲಾಗಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.

ಆನಲ್ಸ್ ಆಫ್ ಇಂಟರ್‌ನ್ಯಾಷನಲ್ ಮೆಡಿಸಿನ್ ನಿಯತಕಾಲಿಕದಲ್ಲಿ ಈ ಅಧ್ಯಯನವನ್ನು ಪ್ರಕಟಿಸಲಾಗಿದೆ. ಎಸ್ಪೆರಂಜಾದ ರೋಗಿಯೋರ್ವ ಹೆಚ್.ಐ.ವಿ. ಯಿಂದ ಬಳಲುತ್ತಿದ್ದ. ಆತನ 1.5 ಶತಕೋಟಿ ರಕ್ತ ಹಾಗೂ ಅಂಗಾಂಶ ಕಣಗಳ ಅಧ್ಯಯನ ನಡೆಸಲಾಗಿದ್ದು, ಯಾವುದೇ ಸೋಂಕು ಉಳಿದಿರುವುದು ಕಂಡು ಬಂದಿಲ್ಲ ಎಂದು ತಿಳಿಸಲಾಗಿದೆ.

ಈ ರೀತಿ ಗುಣವಾಗಿರುವುದರ ಹಿಂದಿನ ಬೆಳವಣಿಗೆಯನ್ನು ಸಂಶೋಧಕರು ಅರ್ಥ ಮಾಡಿಕೊಂಡರೆ, ಇತರೆ ಸೋಂಕಿತರಿಗೆ ನೆರವಾಗಲು ಸಾಧ್ಯ ಎಂದು ವರದಿಯಲ್ಲಿ ತಿಳಿಸಲಾಗಿದೆ. ಪ್ರಸಕ್ತ ನೀಡಲಾಗುತ್ತಿರುವ ಆಂಟಿ - ರಿಟ್ರೋವೈರಲ್ ಥೆರಪಿ (ಎ.ಆರ್.ಟಿ.)ಯಿಂದ ಹೆಚ್.ಐ.ವಿ. ಹೊಸ ವೈರಸ್ (2ನೇ ಪುಟಕ್ಕೆ)

## ಗೂಗಲ್ ಮ್ಯಾಪ್ಸ್‌ನಲ್ಲಿ ತಾನಿರುವ ಜಾಗ ತೋರಿಸಬೇಕು : ಷರತ್ತು

ನವದೆಹಲಿ, ನ.16 – ಜೆಇಇ (ಮೇನ್) ಪರೀಕ್ಷೆ ಫಲಿತಾಂಶ ತಿರುಚಿದ ಆರೋಪ ಎದುರಿಸುತ್ತಿರುವ ವ್ಯಕ್ತಿಗೆ ಜಾಮೀನು ನೀಡಿರುವ ಸಿಬಿಐ ವಿಶೇಷ ನ್ಯಾಯಾಲಯ, ಗೂಗಲ್ ಮ್ಯಾಪ್ಸ್ ಮೂಲಕ ತಾನಿರುವ ಜಾಗವನ್ನು ತೋರಿಸುವಂತೆ ಹೇಳಿದೆ. ಸಿಬಿಐ ಪ್ರಕರಣದಲ್ಲಿ ಈ ರೀತಿಯ ಕ್ರಮ ತೆಗೆದುಕೊಂಡಿರುವುದು ಇದೇ ಮೊದಲು.

ಅಫಿನಿಟಿ ಎಜುಕೇಷನ್ ಖಾಸಗಿ ಸಂಸ್ಥೆಯ ಪುಣೆಯ ಅಧಿಕಾರಿಯಾಗಿರುವ ಅಜಿಂಕ್ಯ ನರಾರಿ ಪಾಟೀಲ್‌ಗೆ ಜಾಮೀನು ನೀಡುವಾಗ ನ್ಯಾಯಾಲಯ ಈ ಸೂಚನೆ ನೀಡಿದೆ. ಆರೋಪಿ ಜೆಇಇ (ಮೇನ್) ಪರೀಕ್ಷೆಯಲ್ಲಿ ಉತ್ತೀರ್ಣಗೊಳಿಸಿ ಇಂಜಿನಿಯರಿಂಗ್‌ಗೆ ಪ್ರವೇಶ ಕೊಡಿಸುವುದಾಗಿ ಅಭ್ಯರ್ಥಿಗಳನ್ನು ಸೆಳೆಯುತ್ತಿರುವುದಾಗಿ ಆರೋಪಿಸಲಾಗಿದೆ.

ಕಳೆದ ಸೆಪ್ಟೆಂಬರ್ 2ರಂದು ಸಿಬಿಐ ಈ ಜಾಲವನ್ನು ಬಯಲಿಗೆ ಎಳೆದಿತ್ತು. ಅಭ್ಯರ್ಥಿಗಳಿಗೆ ಅಕ್ರಮವಾಗಿ ಪ್ರಮುಖ ಉತ್ತರ ನೀಡುವ ಮೂಲಕ ವಂಚನೆ ನಡೆಸಲಾಗುತ್ತಿತ್ತು ಎಂದು ಸಿಬಿಐ ಆರೋಪಿಸಿತ್ತು. ಆರೋಪಿಗೆ (2ನೇ ಪುಟಕ್ಕೆ)

## ಬೋರ್ಡ್ ಪರೀಕ್ಷೆಯಾಗಿ ಪಿಯು ಅರ್ಧ ವಾರ್ಷಿಕ ಪರೀಕ್ಷೆ

**ಎಐಡಿಎಸ್‌ಓ ನೇತೃತ್ವದಲ್ಲಿ ಪಿಯುಸಿ ವಿದ್ಯಾರ್ಥಿಗಳ ಪ್ರತಿಭಟನೆ**

ದಾವಣಗೆರೆ, ನ.16- ದ್ವಿತೀಯ ಪಿಯುಸಿ ಅರ್ಧ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಪರೀಕ್ಷೆಯಾಗಿ ನಡೆಸುವ ಹಠಾತ್ ಹೇರಿಕೆಯನ್ನು ಹಿಂಪಡೆಯಲು ಆಗ್ರಹಿಸಿ, ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ) ನೇತೃತ್ವದಲ್ಲಿ ವಿವಿಧ ಕಾಲೇಜುಗಳ ಪಿಯುಸಿ ವಿದ್ಯಾರ್ಥಿಗಳು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ಪ್ರತಿಭಟಿಸಿದ ಸಂಘಟನೆಯ ಪದಾಧಿಕಾರಿಗಳು, ವಿದ್ಯಾರ್ಥಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆಯ ನೀತಿಯನ್ನು ಖಂಡಿಸಿದರು. ಪ್ರತಿಭಟನಾ ಮೆರವಣಿಗೆ ಮುಖೇನ ಉಪವಿಭಾಗಾಧಿಕಾರಿ ಕಚೇರಿಗೆ ತೆರಳಿ ಉಪವಿಭಾಗಾಧಿಕಾರಿ ಮುಖಾಂತರ ಶಿಕ್ಷಣ ಸಚಿವರಿಗೆ ಮನವಿ ಸಲ್ಲಿಸಿದರು.

ಇದೇ ದಿನಾಂಕ 12ರಂದು ಪದವಿ ಪೂರ್ವ ಶಿಕ್ಷಣ ಇಲಾಖೆಯು ದ್ವಿತೀಯ ಪಿಯು ಅರ್ಧ ವಾರ್ಷಿಕ ಪರೀಕ್ಷೆ-2021ರ ಮರು ವಿನ್ಯಾಸದ ಕುರಿತು ಸುತ್ತೋಲೆ ಹೊರಡಿಸಿದೆ. ಸುತ್ತೋಲೆಯ ಪ್ರಕಾರ ಈಗ ನಡೆಯುವ ಅರ್ಧ ವಾರ್ಷಿಕ ಪರೀಕ್ಷೆಯನ್ನು ರಾಜ್ಯ ಬೋರ್ಡ್ ಪರೀಕ್ಷೆಯಾಗಿ ನಡೆಸಲಾಗುವುದು. ಪ್ರಶ್ನೆ ಪತ್ರಿಕೆಗಳು ಕೇಂದ್ರ ಕಚೇರಿಯಿಂದ ಬರುತ್ತವೆ. ನವೆಂಬರ್ 29ರಿಂದ ಪರೀಕ್ಷೆಗಳು ನಡೆಯಲಿವೆ. (2ನೇ ಪುಟಕ್ಕೆ)

## ಪುನೀತ್‌ಗೆ ಮರಣೋತ್ತರ ಕರ್ನಾಟಕ ರತ್ನ



ಬೆಂಗಳೂರು, ನ. 16- ಇತ್ತೀಚೆಗೆ ನಿಧನರಾದ ಚಿತ್ರನಟ ಪುನೀತ್ ರಾಜ್ ಕುಮಾರ್ ಅವರಿಗೆ ಮರಣೋ ತ್ತರವಾಗಿ ಕರ್ನಾಟಕ ರತ್ನ ಪ್ರಶಸ್ತಿ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕನ್ನಡನಾಡಿನ ಜನ ಪ್ರಿಯ ಕಲಾವಿದ ದಿವಂಗತ ಪುನೀತ್ ರಾಜಕುಮಾರ್ ಅವರಿಗೆ ಮರಣೋತ್ತರ ಕರ್ನಾಟಕ ರತ್ನ ಪ್ರಶಸ್ತಿ ನೀಡಿ ಗೌರವಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ ಎಂದು ತಿಳಿಸಿದ್ದಾರೆ.

ಅರಮನೆ ಮೈದಾನದಲ್ಲಿ ಆಯೋಜಿಸ ಲಾಗಿದ್ದ ಪುನೀತ ನಮನ ಕಾರ್ಯಕ್ರಮವನ್ನು ದ್ದೇಶಿಸಿ ಮಾತನಾಡಿದ ಬೊಮ್ಮಾಯಿ, ಅಗಲಿದ ನಟನಿಗೆ ಮರಣೋತ್ತರ ಕರ್ನಾಟಕ ರತ್ನ ಘೋಷಿಸಿ, ವರನಟ ಡಾ. ರಾಜ ಕುಮಾರ್ ಅವರರಂತೆ ಪುನೀತ್‌ಗೂ ಸ್ಮಾರಕ ನಿರ್ಮಿಸುವುದಾಗಿ ಹೇಳಿದ್ದಾರೆ. ಪುನೀತ್ ಅತ್ಯುತ್ತಮ ಚಾರಿತ್ರ್ಯದ ಕಾರಣ ಇತಿಹಾಸದ ಪುಟಗಳಲ್ಲಿ ಸೇರಿದ್ದಾರೆ. ಅವರಂತೆ ವಿನಯ, ವಿಧೇಯತೆಯನ್ನು ರೂಢಿಸಿಕೊಂಡ ವರು ಕಡಿಮೆ ಎಂದು ಬೊಮ್ಮಾಯಿ ಹೇಳಿದ್ದಾರೆ.

ಕೇವಲ ಕರ್ನಾಟಕ ರತ್ನ ಮಾತ್ರವಲ್ಲದೆ (3ನೇ ಪುಟಕ್ಕೆ)


॥ ಶ್ರೀ ಬಸವೇಶ್ವರ ಪ್ರಸನ್ನ ॥

**ಕೈಲಾಸ ಶಿವಗಣಾರಾಧನೆ ಆಹ್ವಾನ**



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು ಕೆಚ್ಚೇನಹಳ್ಳಿ ವಾಸಿ
ಶ್ರೀ ಕೆ.ಹೆಚ್. ಶಿವಕುಮಾರ್ ಮತ್ತು ಸಹೋದರರು
ಮಾಡುವ ವಿಜ್ಞಾಪನೆಗಳು.
ದಿನಾಂಕ : 13.11.2021ನೇ ಶನಿವಾರ ಬೆಳಗಿನ ಜಾವ 3.50 ಗಂಟೆಗೆ ನನ್ನ ಅಣ್ಣ
ದಿ॥ ಪಟೇಲ್ ಕೆ.ಹೆಚ್. ಸಿದ್ದಪ್ಪನವರ ಧರ್ಮಪತ್ನಿಯವರಾದ
ಶ್ರೀಮತಿ ಮೀನಾಕ್ಷಮ್ಮ
ಇವರು, ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
"ಕೈಲಾಸ ಶಿವಗಣಾರಾಧನೆ"ಯನ್ನು
ದಿನಾಂಕ : 17.11.2021ನೇ ಬುಧವಾರ ಬೆಳಿಗ್ಗೆ 11.00ಕ್ಕೆ, ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಭವನ, ಬಾಪೂಜಿ ಹೈಸ್ಕೂಲ್ ಹತ್ತಿರ, ಎಂ.ಸಿ.ಸಿ. ಬಿ ಬ್ಲಾಕ್, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಮಂಜುಳ ಶಿವಣ್ಣಗೌಡ (ಶಿರಸಿ), ದಾವಣಗೆರೆ.
ಸಹೋದರರು ಮತ್ತು ಸಹೋದರಿಯರು, ಮಕ್ಕಳು, ಶ್ರೀ ಕೆ.ಹೆಚ್. ಶಿವಕುಮಾರ್ ಮತ್ತು ಸಹೋದರರು, ಕೆಚ್ಚೇನಹಳ್ಳಿ., ಮೊಮ್ಮಕ್ಕಳು, ಗೌಡ್ರು ವಂಶಸ್ಥರು, ಜಗಳೂರು.
ಹಾಗೂ ಬಂಧು-ಮಿತ್ರರು. ಫೋ. : 89719 49221, 99861 37215

ವಿ.ಸೂ. : ಆಹ್ವಾನ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಪುಣ್ಯಸ್ಮರಣೆ**

**ಲಿಂ॥ ಎಂ.ಜಿ. ಮಹೇಶ್ವರಪ್ಪ**



ನೀವು ನಮ್ಮನ್ನಗಲಿ ದಿನಾಂಕ 17.11.2021ಕ್ಕೆ ಐದು ವರ್ಷಗಳಾದವು. ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು, ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ


ಸಹೋದರರು : ಎಂ.ಜಿ. ರಾಜಣ್ಣ, ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಎಂ. ಲಲಿತಾ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್, ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.



**ಹೃದಯಪೂರ್ವಕ ಕೃತಜ್ಞತೆಗಳು**

ಭಾರತ ಸರ್ಕಾರದ ಇಂಧನ ಸಚಿವಾಲಯದ ಅಧೀನದಲ್ಲಿರುವ
(ಮಹಾರತ್ನ ಕಂಪನಿ) ಸಾರ್ವಜನಿಕ ವಲಯದ
ಪವರ್ ಗ್ರೀಡ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್ ಕಂಪನಿಗೆ
ಆಡಳಿತ ಮಂಡಳಿಯ ನಿರ್ದೇಶಕರಾಗಿ ಆಯ್ಕೆ ಮಾಡಲು ಸಹಕರಿಸಿದ
ದೇಶದ ಹೆಮ್ಮೆಯ ಪ್ರಧಾನಿಗಳಾದ ಸನ್ಮಾನ್ಯ ನರೇಂದ್ರ ಮೋದಿಜೀ ಅವರಿಗೆ,
ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ.ನಡ್ಡಾಜೀ ಅವರಿಗೆ,
ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಬಿ.ಎಲ್.ಸಂತೋಜೀ ಅವರಿಗೆ,
ಮಾಜಿ ಕೇಂದ್ರ ಸಚಿವರು ಮತ್ತು ಸಂಸರಾದ ಡಾ. ಜಿ.ಎಂ.ಸಿದ್ದೇಶ್ವರ ಅವರಿಗೆ,
ಶಾಸಕರಾದ ಶ್ರೀ ಎಸ್.ಎ.ರವೀಂದ್ರನಾಥ್ ಅವರಿಗೆ,
ಮಾಜಿ ಮುಖ್ಯ ಸಚೇತಕರಾದ ಡಾ॥ ಎ.ಹೆಚ್.ಶಿವಯೋಗಿಸ್ವಾಮಿ ಅವರಿಗೆ,
ಹಾಗೂ ಪಕ್ಷದ ಎಲ್ಲಾ ಮುಖಂಡರಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ
ಆಯ್ಕೆ ಮಾಡಲು ಸಹಕರಿಸಿದ ಎಲ್ಲರಿಗೂ



ನನ್ನ ಹೃದಯಪೂರ್ವಕ
ಕೃತಜ್ಞತೆಗಳು
**ಕೆ.ಎನ್.ಓಂಕಾರಪ್ಪ**
ನಿರ್ದೇಶಕರು,
ಪವರ್ ಗ್ರೀಡ್ ಕಾರ್ಪೋರೇಷನ್ ಆಫ್
ಇಂಡಿಯಾ ಲಿಮಿಟೆಡ್,
ನವದೆಹಲಿ, ಭಾರತ ಸರ್ಕಾರ.

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ. : 98453 17181

**ಬಾಡಿಗೆಗೆ**
3,000 ಚ. ಅಡಿ ಮೊದಲನೇ ಮಹಡಿ, ಪಿ.ಜೆ. ಬಡಾವಣೆ, ಕಮರ್ಷಿಯಲ್ 22×55, 2 ಗೋಡೌನ್‌ಗಳು ಬಸಾಪುರ ರಸ್ತೆ. ಸಂಪರ್ಕಿಸಿ: 94480 28103

**ಬಾಡಿಗೆಗೆ ಬೇಕಾಗಿದೆ**
ಖಾಲಿ ಜಾಗ ಭೂ ಬಾಡಿಗೆ ಪ್ರಕಾರ ಹೋಟೆಲ್ ನಡೆಸಲು ಸ್ಥಳಾವಕಾಶ ಬೇಕಾಗಿದೆ.
78995 94599

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆಯಲ್ಲಿ 30×50 ಪಶ್ಚಿಮ, ಶಿವ ಪಾರ್ವತಿ ಬಡಾವಣೆಯಲ್ಲಿ 30×50 ಪಶ್ಚಿಮ, 40×50 ಉತ್ತರ, ಪೂರ್ವ ಕಾರ್ನರ್, ರಿಂಗ್ ರೋಡ್ ಬಾಲಾಜಿ ಲೇಔಟ್‌ನಲ್ಲಿ 30×50 ಉತ್ತರ ಅಕ್ಕ-ಪಕ್ಕ
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಆಫೀಸ್ ಬಾಯ್ ಕೆಲಸಕ್ಕೆ ಸ್ವಂತ ಸೈಕಲ್‌ವುಳ್ಳ ಸ್ಥಳೀಯ ಯುವಕರು ಬೇಕಾಗಿದ್ದಾರೆ.
ಅಂದನೂರು ಚಿಟ್ಸ್ (ರಿ)
ರಾಂ & ಕೋ ಸರ್ಕಲ್, ದಾವಣಗೆರೆ

**ನೇರ ಪರೀಕ್ಷೆಗಳು**
SSLC- 7,8,9/10 ಪಾಸ್ /ಫೇಲ್.
PUC- Science, Arts, Com. NTC- ನರ್ಸರಿ ಟೀಚರ್ಸ್ ಟ್ರೈನಿಂಗ್ ಉನ್ನತ ವಿದ್ಯಾಭ್ಯಾಸ, ಸರಕಾರಿ ನೌಕರಿ, ಪ್ರಮೋಷನ್‌ಗೆ ಅನುಕೂಲ.
ಸಂಪರ್ಕಿಸಿ: ಶ್ರೀ ಗಂಗೋತ್ರಿ ಎಜುಕೇಷನ್ ಟ್ರಸ್ಟ್ ಲಾಯರ್ ರೋಡ್, ದಾವಣಗೆರೆ.
86602 35013

**ಸೈಟುಗಳು ಮಾರಾಟಕ್ಕಿವೆ**
ಶಿವಪಾರ್ವತಿ ಲೇಔಟ್, ಬನಶಂಕರಿ ಬಡಾವಣೆ, ರಂಗನಾಥ ಬಡಾವಣೆ, ಜಯನಗರ, ಜೆ.ಹೆಚ್. ಪಟೇಲ್ ಬಡಾವಣೆ ಹಾಗೂ ದಾವಣಗೆರೆಯಾದ್ಯಂತ ಸೈಟುಗಳು ಮಾರಾಟಕ್ಕಿವೆ. ಕಮರ್ಷಿಯಲ್ ಮತ್ತು ಮನೆಗಳು, ಹೊಲ ಮಾರಾಟಕ್ಕಿವೆ.
97315 12365

**ತಕ್ಷಣ ಬೇಕಾಗಿದ್ದಾರೆ**
ನಮ್ಮ ಹೋಟೆಲ್ ಪೂಜಾ ಇಂಟರ್‌ನ್ಯಾಷಲ್ ದಾವಣಗೆರೆಯಲ್ಲಿ Electrician ಬೇಕಾಗಿದ್ದಾರೆ. ಅನುಭವ ಇದ್ದವರಿಗೆ ಆದ್ಯತೆ ಕೊಡಲಾಗುವುದು. ಸಂಪರ್ಕಿಸಿ
99029 35937
96060 96698

**ಬೇಕಾಗಿದ್ದಾರೆ**
APE ಆಟೋ, TATA Ace ಆಟೋಗೆ ಡ್ರೈವರ್ ಡೆಲಿವರಿ ಬಾಯ್ ಬೇಕಾಗಿದ್ದಾರೆ.
ಧನಶ್ರೀ ಮಾರ್ಕೆಟಿಂಗ್
ಎಪಿಎಂಸಿ 'ಇ' ಬ್ಲಾಕ್, ದಾವಣಗೆರೆ
94838 94420
94484 56993

**ಬೇಕಾಗಿದ್ದಾರೆ**
ಹರಿಹರದ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ (ಹರಿಹರದವರಿಗೆ ಆದ್ಯತೆ ನೀಡಲಾಗುವುದು)
80502 19547
63641 33480

**ಲೀಸ್/ಬಾಡಿಗೆಗೆ ಮನೆ ಬೇಕಾಗಿದೆ**
ವಿದ್ಯಾ ತರಗತಿಗಳನ್ನು ನಡೆಸಲು 4 ಕೊಠಡಿ ಇರುವ ಮನೆ ಲೀಸ್ / ಬಾಡಿಗೆಗೆ ಬೇಕಾಗಿದೆ. ಆಂಜನೇಯ ಬಡಾವಣೆ, ಎಂ.ಸಿ.ಸಿ 'ಎ' ಹಾಗೂ 'ಬಿ' ಬ್ಲಾಕ್, ವಿದ್ಯಾನಗರ, ಪಿ.ಜೆ. ಬಡಾವಣೆ
ಸಂಪರ್ಕಿಸಿ:
95356 56163

**ಬೇಕಾಗಿದ್ದಾರೆ**
ವಾರ್ಡ್ ಬಾಯ್ಸ್, ಆಯಾ ಬೇಕಾಗಿದ್ದಾರೆ.
ನೈಪುಣ್ಯ ಹಾಸ್ಪಿಟಲ್
80959 32555
89708 65248

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**FOR RENT/ LEASE**
3 BHK independent House, west facing near Purantar Hospital, MCC A' Block Davangere.
Ph. 99454 23613

# ಹೊಳೆಸಿರಿಗೆರೆ : ಶಾಲೆಗೆ ಬಣ್ಣ ಬಳಿದು ಸ್ವಚ್ಛತೆಗೆ ಚಾಲನೆ



ಮಲೇಬೆನ್ನೂರು, ನ.16 - ಮಕ್ಕಳ ದಿನಾಚರಣೆ ಹಾಗೂ ಕೇಂದ್ರದ ಮಾಜಿ ಸಚಿವ ಕೊಂಡಜ್ಜಿ ಬಸಪ್ಪನವರ ಪುಣ್ಯ ಸ್ಮರಣೆ ಅಂಗವಾಗಿ ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ ಅವರ ನೇತೃತ್ವದಲ್ಲಿ ಹೊಳೆಸಿರಿಗೆರೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೊಠಡಿಗಳಿಗೆ ಬಣ್ಣ ಬಳಿದು ಸ್ವಚ್ಛತೆ ಮಾಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಈ ವೇಳೆ ಹಾಜರಿದ್ದು ಮಾತನಾಡಿದ ಜಿ.ಪಂ ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ ಅವರು, ನಿಖಿಲ್ ಕೊಂಡಜ್ಜಿ ಅವರ ಸಾಮಾಜಿಕ ಕಳಕಳಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ಹರಿಹರ ತಾಲ್ಲೂಕಿನ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಈ ರೀತಿ ಕಾರ್ಯಕ್ರಮ ಮಾಡಿ ಎಂದು ಸಲಹೆ ನೀಡಿದರು.

ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ನಿವೃತ್ತ ಸೈನಿಕ ಎನ್. ಪರಶುರಾಮಪ್ಪ, ಶಾಲೆ ಮುಖ್ಯ ಶಿಕ್ಷಕ ಪಾಲಾಕ್ಷಪ್ಪ ಮಾತನಾಡಿದರು.

ಗ್ರಾ.ಪಂ. ಸದಸ್ಯ ವಿನಾಯಕ, ಬಿ. ಶೇಖರಪ್ಪ, ಸರ್ಕಾರಿ ಬಾಲಕಿಯರ ಪ್ರೌಢಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಗುಳೇಶ್, ಸಾಕ್ಷರತಾ ಸಂಯೋಜಕ ಎಂ. ಶಿವಕುಮಾರ್, ಬಿ.ಶಿವಕುಮಾರ್, ಕಿಸಾನ್ ಕಾಂಗ್ರೆಸ್ ಅಧ್ಯಕ್ಷ ಕುಂಬಳೂರು ವಾಸು, ಮಲೇಬೆನ್ನೂರು ಪಿಎಸಿಎಸ್ ಅಧ್ಯಕ್ಷ ಪಿ.ಆರ್. ಕುಮಾರ್, ಗ್ರಾ.ಪಂ. ಮಾಜಿ ಅಧ್ಯಕ್ಷ ಬೋವಿ ಕುಮಾರ್, ಪುರಸಭೆ ಮಾಜಿ ಸದಸ್ಯ ಎ.ಆರೀಫ್ ಅಲಿ, ಬುಕ್ ಸ್ಟಾಲ್ ಶಿವಕುಮಾರ್, ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಹೊನ್ನಾಳಿ ರಂಜಿತ್, ನವೀನ್ ನೆಲವಾಡಿ, ಬಾಷಾ, ಪವನ್, ಸೈಯದ್ ಮಲ್ಲಿಕ್, ಗೌಸ್, ತಿಪ್ಪೇಶ್ ಮತ್ತಿತರರು ಭಾಗವಹಿಸಿದ್ದರು.

# ರಾಣೇಬೆನ್ನೂರಿನಲ್ಲಿ ದೇವಲ ಮಹರ್ಷಿ ಜಯಂತಿ



ರಾಣೇಬೆನ್ನೂರು, ನ.16- ದೇವಾಂಗ ಧರ್ಮದ ಆಧಾರ ಸ್ಥಂಭವಾದ ದೇವಲ ಮಹರ್ಷಿ ಅವರು ಪರಮಾತ್ಮನ ಚಿತ್‌ಶಕ್ತಿಯಿಂದ ಅವತಾರ ತಾಳಿ ಮೂರು ಲೋಕಕ್ಕೆ ವಸ್ತ್ರ ಸೂತ್ರ ನೀಡಿದರು ಎಂದು ಸಮಾಜದ ಜಿಲ್ಲಾಧ್ಯಕ್ಷ ಸಂಕಪ್ಪ ಮಾರನಾಳ ಹೇಳಿದರು.

ಶ್ರೀ ರಾಮಲಿಂಗೇಶ್ವರ ಮಠದಲ್ಲಿ ನಡೆದ ದೇವಲ ಮಹರ್ಷಿ ಜಯಂತಿ ಕುರಿತು ಅವರು ಮಾತನಾಡಿದರು.

ವಿದ್ಯಾಧರ, ಚಿತ್ರಯೋಗಿ, ದೇವಶಾಲಿ, ಪುಷ್ಪದಂತ, ಬೇತಾಳ, ವರರುಚಿ ನಂತರದಲ್ಲಿ ವಚನಬ್ರಹ್ಮ ದಾಸೀಮಯ್ಯರಾಗಿ ಸಾಮಾಜಿಕ ಚಿಂತನೆ ನಡೆಸಿದರು.ದೇವಾಂಗ ಸಮಾಜದ ಕುಲಗುರು ಶ್ರೀ ರಾಮಲಿಂಗ, ಶ್ರೀ ಚೌಡೇಶ್ವರಿ ಹಾಗೂ ಶ್ರೀ ಬನಶಂಕರಿಯರಾಗಿದ್ದು, ಶೈವ ಆಗಮೋಕ್ತ, ಶಾಕ್ತ, ವೈಷ್ಣವ, ಸಾಮದೇವ ಮತ್ತು 140 ಗೋತ್ರಗಳಲ್ಲಿ ದೇವಾಂಗ ತತ್ವ ಮತವು ಬೆಳಗುತ್ತದೆ.

ವ್ಯಾಸ ರಚಿತ ಬ್ರಹ್ಮಾಂಡ ಪುರಾಣದ ಶ್ರೀಮದ್ ಭಗವದ್ಗೀತೆಯ ವಿಭೂತಿ ಯೋಗದಲ್ಲಿ ದೇವಲ ಮಹರ್ಷಿಯ ಪ್ರಸ್ತಾಪವಿದೆ ಎಂದರು. 12 ನೇ ಶತಮಾನದ ಹೇಮಕೂಟ ಗಾಯತ್ರಿ ಪೀಠವು ದೇವಾಂಗರ ಏಕೈಕ ಪೀಠವಾಗಿದೆ. ಕಾಶಿ, ಶ್ರೀಶೈಲ, ಹಂಪಿ, ಶೋಣಾಚಲಂ ಮತ್ತು ಶಂಭು ಶೈಲಂ ಜಗದ್ಗುರು ಪೀಠಗಳಾಗಿವೆ ಎಂದರು.

ಪ್ರಾರಂಭದಲ್ಲಿ ದೇವಲ ಮಹರ್ಷಿ ಭಾವಚಿತ್ರದ ಮೆರವಣಿಗೆಯು ನಡೆಯಿತು. ಮೆರವಣಿಗೆಯು ಕುದುರಿಗಲ್ಲಿಯ ಶ್ರೀ ಬನಶಂಕರಿ ದೇವಸ್ಥಾನದಿಂದ ಹೊರಟು, ದೊಡ್ಡಪೇಟೆ ಶ್ರೀ ರಾಮಲಿಂಗ ಮಠ ತಲುಪಿತು. ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಧಾರ್ಮಿಕ ಸಭೆ ನಡೆಯಿತು.

ಡಾ. ಬಸವರಾಜ ಕೇಲಗಾರ, ಬಸವರಾಜ ಲಕ್ಷ್ಮೇಶ್ವರ, ಬಸವರಾಜ ಮೈಲಾರ, ಅಶೋಕ ದುರ್ಗದಶೀಮಿ, ನಾಗರಾಜ ಲಕ್ಷ್ಮೇಶ್ವರ, ಗಣೇಶ ಸಿರಗೂರ, ಲಕ್ಷ್ಮಿಕಾಂತ ಹುಲಗೂರ, ಗಣೇಶ ಸಾಲಗೇರಿ, ಗಣೇಶ ಹಾವನೂರ, ಈರಣ್ಣ ಕೋಳಿವಾಡ, ಸೌಮ್ಯ ಹರಿಹರ, ಅಮೃತಾ ಹಳ್ಳಿಯವರ, ಭೋಜರಾಜ ಗುಲಗಂಜಿ, ರತ್ನಾ ದಿಗಿದಿಗಿ, ನಾರಾಯಣಪ್ಪ ಹುಲಗೂರ, ಕರಬಸಪ್ಪ ನೀಲಗುಂದ ಮತ್ತಿತರರಿದ್ದರು.

# ಕಾಡಜ್ಜಿಗೆ ಬಸ್ ವ್ಯವಸ್ಥೆ : ಗ್ರಾಮಸ್ಥರ ಹರ್ಷ



ದಾವಣಗೆರೆ, ನ.16- ತಾಲ್ಲೂಕಿನ ಕಾಡಜ್ಜಿ ಗ್ರಾಮಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಸ್ ವ್ಯವಸ್ಥೆ ಮಾಡಿದ್ದು, ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಹಿಂದೆ ಗ್ರಾಮಕ್ಕೆ ಸಾರಿಗೆ ಸಂಸ್ಥೆ ಬಸ್ ಬರುತ್ತಿದ್ದು, ಕೆಲ ವರ್ಷಗಳಿಂದ ಬರುತ್ತಿರಲಿಲ್ಲ. ಇದರಿಂದಾಗಿ ಗ್ರಾಮಸ್ಥರು ಮತ್ತು ವಿದ್ಯಾರ್ಥಿಗಳಿಗೆ ಬಹಳಷ್ಟು ತೊಂದರೆಯಾಗಿತ್ತು.

ಗ್ರಾಮಸ್ಥರು ರಾಜ್ಯ ಸಾರಿಗೆ ಸಚಿವ ಶ್ರೀರಾಮುಲು ಅವರಿಗೆ ಮೇಲ್ ಮಾಡಿ ತಮ್ಮೂರ ಲ್ಲಿರುವ ವಿವಿಧ ಸೌಲಭ್ಯಗಳು, ಸಮಯಕ್ಕೆ ಸರಿಯಾಗಿ ಬಸ್ ಇಲ್ಲ ದ್ದರಿಂದ ಆಗುತ್ತಿರುವ ತೊಂದರೆ ಬಗ್ಗೆ ಗಮನಕ್ಕೆ ತಂದಿದ್ದರು. ಶಾಸಕ ಎಸ್.ಎ.ರವೀಂದ್ರನಾಥ ಅವರ ಗಮನಕ್ಕೂ ತರಲಾಗಿತ್ತು. ತಕ್ಷಣವೇ ಗಮನಹರಿಸಿದ ಸಾರಿಗೆ ಸಚಿವರು ಮತ್ತು ಶಾಸಕರು ಇಲಾಖೆ ಅಧಿಕಾರಿಗಳಿಗೆ ಸೂಚಿಸಿ ಕಾಡಜ್ಜಿ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಿದ್ದಾರೆ.

# ಸಮರ್ಥರಿಗೆ ಅನ್ವೇಷಣೆ

(1ನೇ ಪುಟದಿಂದ) ಯಾವುದೇ ಕ್ಷೇತ್ರಕ್ಕೆ ಅಭ್ಯರ್ಥಿ ಅಂತಿಮಗೊಳಿಸಲು ಇವರಿಂದ ಸಾಧ್ಯವಾಗಿಲ್ಲ.

ಇನ್ನು ಬಿಜೆಪಿಯಲ್ಲಿ ಆ ಪಕ್ಷದ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹಠಾತ್ತನೆ ಎಲ್ಲಾ ವಿಚಾರಗಳಿಂದಲೂ ದೂರ ಉಳಿದಿದ್ದಾರೆ. ಮುಖ್ಯಮಂತ್ರಿ ಬೊಮ್ಮಾಯಿ ಅವರೇ ಕೋರ್ ಕಮಿಟಿ ಹಾಗೂ ಸಂಘಟನೆಯ ಸಲಹೆಯಂತೆ ಅಭ್ಯರ್ಥಿಗಳ ಆಯ್ಕೆಗೆ ಮುಂದಾಗಬೇಕಾಗಿದೆ.

ಜಾತ್ಯತೀತ ಜನತಾದಳ ಮಾತ್ರ ತನ್ನ ಪ್ರಾಬಲ್ಯವಿರುವ 5 ರಿಂದ 7 ಕ್ಷೇತ್ರಗಳಲ್ಲಿ ಕಣಕ್ಕಿಳಿಯುವ ಬಗ್ಗೆ ತೀರ್ಮಾನ ಕೈಗೊಂಡಿದೆ.

ಜೆಡಿಎಸ್‌ನಲ್ಲೂ ಅಧಿಕೃತವಾಗಿ ಅಭ್ಯರ್ಥಿಗಳ ಆಯ್ಕೆ ಅಂತಿಮವಾಗಿದ್ದರೂ, ಅದನ್ನು ಬಹಿರಂಗಪಡಿಸಲು ಆ ಪಕ್ಷದ ನಾಯಕರು ಮುಂದಾಗಿಲ್ಲ.

ಬಿಜೆಪಿಗಿಂತ ಕಾಂಗ್ರೆಸ್‌ನಲ್ಲೇ ಟಿಕೆಟ್‌ಗೆ ಬೇಡಿಕೆ ಹೆಚ್ಚಿದೆ. ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳ ಆಯ್ಕೆ ಸ್ಥಳೀಯವಾಗಿ ಅಂತಿಮಗೊಂಡರೂ, ಅಭ್ಯರ್ಥಿಗಳ ಪಟ್ಟಿಗೆ ವರಿಷ್ಠರಿಂದ ಹಸಿರು ನಿಶಾನೆ ದೊರೆಯಬೇಕು. ಅಲ್ಲಿಯವರೆಗೂ ತಾವೇ ಅಭ್ಯರ್ಥಿ ಎಂದು ಹೇಳಿಕೊಳ್ಳಲು ಯಾರಿಗೂ ಸಾಧ್ಯವಿಲ್ಲ.

25 ಕ್ಷೇತ್ರಗಳಿಗೆ ಡಿಸೆಂಬರ್ 10 ರಂದು ಮತದಾನ, 14 ರಂದು ಮತ ಎಣಿಕೆ ನಡೆಯಲಿದೆ. ನವೆಂಬರ್ 23ಕ್ಕೆ ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿದ್ದು, 24 ರಂದು ನಾಮಪತ್ರಗಳ ಪರಿಶೀಲನೆ, 26 ರಂದು ನಾಮಪತ್ರ ಹಿಂತೆಗೆದುಕೊಳ್ಳಲು ಕಡೆಯ ದಿನವಾಗಿರುತ್ತದೆ.

**ಬಾಡಿಗೆಗೆ ಇದೆ**
31x55 ಅಡಿ ಅಳತೆವುಳ್ಳ ಹೋಂ ಇಂಡಸ್ಟ್ರೀಸ್ ಬಾಡಿಗೆಗೆ ಇದೆ ಹಾಗೂ 10HP ಕರೆಂಟ್ ಹಾಗೂ ಬೋರ್ ವೆಲ್ ಸೌಲಭ್ಯವಿದೆ. ವಿಳಾಸ: ಹನಗವಾಡಿ ಇಂಡಸ್ಟ್ರೀಯಲ್ ಏರಿಯಾ, ಪ್ರಜಾವಾಣಿ ಪ್ರಿಂಟಿಂಗ್ ಪ್ರೆಸ್ ಪಕ್ಕ, ಹರಿಹರ.
98445 46777

**ಸಣ್ಣ ಮನೆ ಬೇಕಾಗಿದೆ**
JH ಪಟೇಲ್ ನಗರದಲ್ಲಾಗಲೀ RTO ಕಛೇರಿ ಆಸುಪಾಸಿನಲ್ಲಾಗಲೀ ದೇವರಾಜ ಅರಸ್ ಬಡಾವಣೆಯಲ್ಲಿ ಆಗಲೀ ಒಂದು ಸಿಂಗಲ್ ಬೆಡ್ ರೂಂ ಇರುವ ಮನೆ ಬೇಕಾಗಿದೆ.
ಮೊ. 88618 83531

**ಬಟ್ಟೆ ಅಂಗಡಿ ಮಾರುವುದಿದೆ**
ಸುಸಜ್ಜಿತವಾದ ಹಾಲಿ ನಡೆಯುತ್ತಿರುವ ಮಹಿಳೆಯರ ಸೀರೆಗಳು, ಕುರ್ತಿಸ್, ಡ್ರೆಸ್ ಮೆಟೀರಿಯಲ್ಸ್ ಇರುವ ಬಟ್ಟೆ ಅಂಗಡಿ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
99023 76642, 94480 46613

**ಅಣಬೆಗಳು ದೊರೆಯುತ್ತವೆ**
ಡಿ.ಸಿ.ಎಂ. ಟೌನ್ ಶಿಪ್‌ನಲ್ಲಿ ಅಣಬೆಗಳು ದೊರೆಯುತ್ತವೆ.
ಸಂಪರ್ಕಿಸಿ
08192 255433

**ರೂಂ ಬಾಡಿಗೆಗಿದೆ**
ಟೀಚರ್ಸ್ ಮತ್ತು ಸ್ಟೂಡೆಂಟ್ಸ್ ವಿದ್ಯಾನಗರ ಪಾರ್ಕ್ ಹತ್ತಿರ ರೂಂ ಬಾಡಿಗೆಗೆ ಇದೆ.
ಸಂಪರ್ಕಿಸಿ
94480 47581

**FOR RENT**
Office Space Available for Rent - 1000 sq ft, 1st Floor. P.J.Extension, 9th Main, Davangere
98808 48628

**ತಕ್ಷಣ ಬೇಕಾಗಿದ್ದಾರೆ**
ಸ್ಯಾಮ್ಸನ್ ಡಿಸ್ಟಿಲರೀಸ್, ದುಗ್ಗಾವತಿ ಹಾಗೂ SS ಆಸ್ಪತ್ರೆ, ಬಾಪೂಜಿ ಆಸ್ಪತ್ರೆ ಹಾಗೂ ದಾವಣಗೆರೆ ಸುತ್ತಮುತ್ತಲು 8 ಗಂಟೆ ಹಾಗೂ 12 ಗಂಟೆ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ಸ್ ತಕ್ಷಣ ಬೇಕಾಗಿದ್ದಾರೆ. ESI-PF ಸೌಲಭ್ಯ ಇರುತ್ತದೆ.
ಅಸೋಸಿಯೇಟೆಡ್ ಎಂಟರ್ ಪ್ರೈಸಸ್, ದಾವಣಗೆರೆ.
99169 29713, 90605 45500, 97390 89022

**LKG, UKG**
Play Group
Admision open
Pay Monthly Fee
Ram & Co circle & Kuvempu Nagara.
93802 29199

**ಶಿಕ್ಷಕಿಯರು ಬೇಕಾಗಿದ್ದಾರೆ**
D.Ed, BA, B.Ed, B.Sc, M.Sc, MA, M.A, B.Ed (English).
Salary- 8,000/- to 10,000
Address: LITTLE CHAMPS GURUKULAM, Near HKR Circle, College Road Nittuvalli, Davangere
90609 06039, 98443 32559

**ಮಾರಾಟಕ್ಕೆ**
ಕುವೆಂಪು ನಗರ ಸೈಟ್ (ಕಾರ್ನರ್) 40×50, ಶಕ್ತಿನಗರ ಸೈಟ್ (ಉತ್ತರ) 30×45, ವಿನಾಯಕ ಬಡಾವಣೆ ಸೈಟ್ (ದಕ್ಷಿಣ) 30×40, ಸಿದ್ದವೀರಪ್ಪ ಬಡಾವಣೆ ಸೈಟ್ (ಪಶ್ಚಿಮ) 48×50, ಉತ್ತಮ ಚಂದ್ ಬಡಾವಣೆ ಸೈಟ್ (ಉತ್ತರ) 35×64
78996 36597, 99165 25828

**ಸೈಟ್‌ಗಳು ಮಾರಾಟಕ್ಕಿವೆ**
2 ಸೈಟ್‌ಗಳು ಮಾರಾಟಕ್ಕಿವೆ.
ಅಳತೆ: 30x60 ಎಂ.ಬಿ. ಸಿಟಿ ಪಕ್ಕದಲ್ಲಿ, ಹೌಸಿಂಗ್ ಬೋರ್ಡ್ ಎದುರು
97430 73102

**WANTED**
Boys required for sales executive job at Food Mart Super market.
Qulification: PUC, Any degree.
98864 63531

**ಬೇಕಾಗಿದ್ದಾರೆ**
Call center Girls- PUC. Degree, Sales Executive- Boys,
ಸಂಪರ್ಕಿಸಿ: ಶ್ರೀ ಕುರುವತಿ ಬಸವೇಶ್ವರ ಫಾರ್ಮಾ, Near Vasan Eyecare, P.J Extension, Davangere.
73494 51224, 99160 67627

**ಬೇಕಾಗಿದ್ದಾರೆ**
ಪ್ರಖ್ಯಾತ ಬಂಗಾರದ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವಿರುವ ಪುರುಷರು ಬೇಕಾಗಿದ್ದಾರೆ.
99649 32113
88808 89524

**ಮನೆ ಬಾಡಿಗೆಗೆ/ಲೀಸ್‌ಗೆ ಇದೆ**
ನೆಲ ಮಹಡಿಯಲ್ಲಿ 2 ಬೆಡ್ ರೂಂನ ಮನೆ ಬಾಡಿಗೆಗೆ/ಲೀಸ್‌ಗೆ ಇದೆ
ವಿಳಾಸ: 116/44 KB ಬಡಾವಣೆ, 2nd ಮೇನ್, ಜೈನ್ ಮಂದಿರದ ಹತ್ತಿರ, ದಾವಣಗೆರೆ.
ಸಂಪರ್ಕಿಸಿ: 70198 96845

**House For Rent Long Term & Short Term Available**
With all Amenities cot, bed, fan, light, UPS, internet, T.V Dining table, Geyser, Kitchen, Stove, Gas etc.
94800 73451

**REQUIRED**
Good looking Male/Female Executives for promoting beauty care products.
Salary: 10k to 18k.
Whatsapp your resume
90089 85112

**WANTED**
Experienced xerox operators
Contact.
94481 54682

**ಬೇಕಾಗಿದ್ದಾರೆ**
ಹಿಟ್ಟಿನ ಗಿರಣಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ರಿಂಗ್ ರಸ್ತೆ ದಾವಣಗೆರೆ.
salary :10,000
91648 51189

ದೇಹದ ತೂಕ ಹೆಚ್ಚಿಸಿಕೊಳ್ಳಿ ಅಥವಾ ತೂಕ ಕಡಿಮೆ ಮಾಡಿಕೊಳ್ಳಿ 100% ವೈಜ್ಞಾನಿಕ ಹಾಗೂ ಸುರಕ್ಷಿತ
**GAIN WEIGHT OR LOSE WEIGHT**
Contact: 91645 46459

**ಮನೆ ಬಾಡಿಗೆ/ಲೀಸ್ ಗೆ ಇದೆ**
ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಮತ್ತು ಲೀಸ್ ಗೆ ಖಾಲಿ ಇದೆ.
ಎಸ್. ಎಸ್. ಹೈಟೆಕ್ ಲೇಔಟ್, ಹೈಟೆಕ್ ಹಾಸ್ಪಿಟಲ್ ಎದುರು, ಧರ್ಮಸ್ಥಳ ಬಿಲ್ಡಿಂಗ್ ಹತ್ತಿರ, ದಾವಣಗೆರೆ
94497 72655

**ಮಾರಾಟಕ್ಕಿವೆ**
2000 ಅಡಿಕೆ ಸಸಿ ಮಾರಾಟಕ್ಕಿವೆ.
ಸಂಪರ್ಕಿಸಿ:ಕೆ.ಜಿ.ಪ್ರಭು ಕಲ್ಪನಹಳ್ಳಿ
97411 64682
77607 01662

**ಬೇಕಾಗಿದ್ದಾರೆ**
ಡಿಗ್ರಿ ಆಗಿ ಕನಿಷ್ಠ 2 ವರ್ಷ ಅನುಭವ ಇರುವ 30 ವರ್ಷ ಮೇಲ್ಪಟ್ಟ ಯುವಕರು Filed Office/ Collection Executive ಹುದ್ದೆಗೆ ಬೇಕಾಗಿದ್ದಾರೆ.
ಆಸಕ್ತರು ಕೂಡಲೇ ಸಂಪರ್ಕಿಸಿ
63644 69937

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near Coffee day, Nutana College Road, Vidyanagara, 2nd Main, Davangere
77603 16576
90080 55813

**AVOID MOSQUITOES**
Mosquito Net for Doors and windowsh, MDF Design Boards available.
SRI GOWRI ENTERPRISES
# 7C2, 4th Cross, Karur Industrial Area, Near D.C Office, P.B Road, Davangere.
72049 94628

**ನೇರ ಪರೀಕ್ಷೆಗಳು**
ಉನ್ನತ ಶಿಕ್ಷಣಕ್ಕೆ ಮತ್ತು ಸರ್ಕಾರಿ ಕೆಲಸಕ್ಕೆ ಉಪಯೋಗ
SSLC, PUC Technical & Non Tecnical Courses Pharmacy & BHMS (Goverment & Private College)
ಶ್ರೀ ಸಾಯಿ ಕರೆಸ್ಪಾಂಡೆನ್ಸ್ ಕಾಲೇಜ್
ಸೋಮ ಮೆಡಿಕಲ್ಸ್ ಮೇಲೆ ಗಣೇಶ ದೇವಸ್ಥಾನದ ಹಿಂಭಾಗ, ರಾಂ&ಕೋ ಸರ್ಕಲ್, ದಾವಣಗೆರೆ.
87490 24789, 82173 02649

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**REQUIRED**
Require Marketing Executive
KALPATARU PLYWOODS
# 6, 1st Main, S. Nijalingappa Layout, Near Lakshmi Floor Mills, Davanagere.
94483 41142
94498 11142

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ॥ ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಬೇಕಾಗಿದ್ದಾರೆ**
ಐಷರ್ ಟ್ರ್ಯಾಕ್ಟರ್ ಶೋ ರೂಂನಲ್ಲಿ ಫೀಲ್ಡ್, ಟೀಮ್ ವರ್ಕ್ ಮಾಡಲು PUC/ ಡಿಗ್ರಿ (ಪಾಸ್/ಫೇಲ್) ಆದ ಯುವಕರು ಬೇಕಾಗಿದ್ದಾರೆ. ಸ್ವಂತ ದ್ವಿಚಕ್ರ ವಾಹನ, ಲೈಸೆನ್ಸ್ ಇದ್ದವರಿಗೆ ಮೊದಲ ಆದ್ಯತೆ. ಆಕರ್ಷಕ ಸಂಬಳ+Incentive +TA,DA ಕೊಡಲಾಗುವುದು.
ಸಂಪರ್ಕಿಸಿ :
ಶಾರದಾ ಆಟೋಸ್
KSRTC, ಬಸ್ ಸ್ಟ್ಯಾಂಡ್ ಹತ್ತಿರ, ದಾವಣಗೆರೆ.
sharadaautosdavangere@gmail.com
ಫೋ.: 63646 76457

**ಶಿಕ್ಷಕಿಯರು ಬೇಕಾಗಿದ್ದಾರೆ**
- ಬಿ.ಎ ಮತ್ತು ಎಂ.ಎ, ಬಿ.ಎಡ್ (ಇತಿಹಾಸ),
- ಬಿ.ಎಸ್ಸಿ , ಬಿ.ಎಡ್,
- ವಾಚ್‌ಮ್ಯಾನ್ ಕುಟುಂಬಸ್ಥರು (ವಯಸ್ಸು 50 ವರ್ಷ), ಆಯಾ 5 ಜನರಿಗೆ (ಮಾತ್ರ)

ಕೊನೆಯ ದಿನಾಂಕ: 24-11-2021
ಸೇಂಟ್ ಮೇರಿಸ್ ಶಾಲೆ
(ಆಂಗ್ಲ ಮಾಧ್ಯಮ) Teachers we want to Fluency Experiance
ವಿನೋಬನಗರ, ದಾವಣಗೆರೆ.
ಮೊ. 94819 09493, 94497 02778

# ಉತ್ತಮ ಆರೋಗ್ಯಕ್ಕಾಗಿ ರಕ್ತದಾನ ಮಾಡಿ

## ಎವಿಕೆ ಕಾಲೇಜಿನಲ್ಲಿನ ರಕ್ತದ ಗುಂಪು ಪರೀಕ್ಷೆಯಲ್ಲಿ ಇಎನ್‌ಟಿ ತಜ್ಞ ಡಾ. ಎ.ಎಂ. ಶಿವಕುಮಾರ್



ದಾವಣಗೆರೆ, ನ.16- ಉತ್ತಮ ಆರೋಗ್ಯಕ್ಕಾಗಿ ಪ್ರತಿ 3 ತಿಂಗಳಿಗೊಮ್ಮೆ ರಕ್ತದಾನ ಮಾಡಬೇಕು ಎಂದು ಭಾರತೀಯ ರೆಡ್ ಕ್ರಾಸ್ ಸೊಸೈಟಿ ಜಿಲ್ಲಾಧ್ಯಕ್ಷರೂ ಆದ ಇಎನ್‌ಟಿ ತಜ್ಞ ಡಾ. ಎ.ಎಂ. ಶಿವಕುಮಾರ್ ಕರೆ ನೀಡಿದ್ದಾರೆ.

ನಗರದ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನಲ್ಲಿ ರೆಡ್‌ಕ್ರಾಸ್‌ನ ಅಂಗ ಸಂಸ್ಥೆ ರೆಡ್ ರಿಬ್ಬನ್ ಕ್ಲಬ್, ಕಾಲೇಜು ಆಡಳಿತ ಮಂಡಳಿ ಸಹಯೋಗದಲ್ಲಿ ಮೊನ್ನೆ ಆಯೋಜಿಸಿದ್ದ ರಕ್ತದ ಗುಂಪು ಪರೀಕ್ಷೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಕ್ತದಾನ ಜಗತ್ತಿನಲ್ಲಿ ಶ್ರೇಷ್ಠ ದಾನ ಎನಿಸಿಕೊಂಡಿದೆ. ದೇಹದಾನ, ನೇತ್ರದಾನವು ವ್ಯಕ್ತಿ ಗತಿಸಿದ ಬಳಿಕ ನಡೆಯುವ ಕ್ರಿಯೆಯಾಗಿವೆ. ಆದರೆ ರಕ್ತದಾನ, ಜೀವ ಉಳಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇದರಿಂದ ದಾನಿಗಳಿಗೆ ಧನ್ಯತಾ ಭಾವ ಪ್ರಾಪ್ತವಾಗುತ್ತದೆ ಎಂದು ಅವರು ಹೇಳಿದರು.

ರಕ್ತದಾನಕ್ಕೂ ಮೊದಲು ಪ್ರತಿ ವ್ಯಕ್ತಿ ಮುಖ್ಯವಾಗಿ ತಮ್ಮ ರಕ್ತದ ಗುಂಪನ್ನು ತಿಳಿದುಕೊಳ್ಳಬೇಕಿದೆ. ಅಪಘಾತ, ತುರ್ತು ಸಂದರ್ಭಗಳಲ್ಲಿ ಇದು ಸಹಾಯಕ್ಕೆ ಬರಲಿದೆ ಎಂದು ಶಿವಕುಮಾರ್ ಅವರು ತಿಳಿಸಿದರು.

ಜನರ ಹಣದಿಂದ ರೆಡ್‌ಕ್ರಾಸ್ ರಕ್ತನಿಧಿ ಕೇಂದ್ರ ಆರಂಭಿಸಲಾಗಿದೆ. ಹೀಗಾಗಿ ಬೇರೆ ಕೇಂದ್ರಗಳಿಗೆ ಹೋಗದೆ, ರೆಡ್‌ಕ್ರಾಸ್‌ನಲ್ಲಿ ರಕ್ತ ನೀಡಿದರೆ, ಬಡವರಿಗೆ ಕಡಿಮೆ ಹಣದಲ್ಲಿ ರಕ್ತ ಪೂರೈಸಬಹುದು ಎಂದರು.

ಎವಿಕೆ ಕಾಲೇಜು ಪ್ರಾಂಶುಪಾಲ ಡಾ. ಬಿ.ಪಿ. ಕುಮಾರ್ ಮಾತನಾಡಿ, ಕಾಲೇಜಿನಲ್ಲಿನ 1,605 ವಿದ್ಯಾರ್ಥಿನಿಯರಲ್ಲಿ 460 ಮಕ್ಕಳಿಗೆ ತಮ್ಮ ರಕ್ತದ ಗುಂಪು ತಿಳಿದಿಲ್ಲ. ಹೀಗಾಗಿ ಇದರ ಪರೀಕ್ಷೆ ನಡೆಸಲಾಗಿದೆ. ಮುಂದಿನ ದಿನಗಳಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಭಾರತೀಯ ರೆಡ್‌ಕ್ರಾಸ್ ಜಿಲ್ಲಾ ಸಂಸ್ಥೆ ಸಹ ಸಂಯೋಜಕ ಡಿ.ಎನ್. ಶಿವಾನಂದ, ನ್ಯಾಕ್ ಸಹ ಸಂಯೋಜಕ ಹಾಗೂ ರೆಡ್ ರಿಬ್ಬನ್ ಕ್ಲಬ್ ಸಹ ಸಂಯೋಜಕರಾದ ಪ್ರಭಾವತಿ ಎಸ್. ಹೊರಡಿ ಇದ್ದರು.

# ಜಾಗ ತೋರಿಸಲು ಜಾಮೀನು ಷರತ್ತು

(1ನೇ ಪುಟದಿಂದ) ಜಾಮೀನು ನೀಡಿರುವ ನ್ಯಾಯಾಲಯ, ಆರೋಪಿ ತಾನಿರುವ ಜಾಗವನ್ನು ಗೂಗಲ್ ಮ್ಯಾಪ್ ಮೂಲಕ ನಿರಂತರವಾಗಿ ಸಿಬಿಐ ಅಧಿ ಕಾರಿ ಗಳಿಗೆ ತೋರಿ ಸುತ್ತಿರಬೇಕು. ಮೊಬೈಲ್ ಅನ್ನು ಸದಾ ಮುಕ್ತವಾಗಿರಿಸಬೇಕು ಎಂದು ಹೇಳಿದೆ.

# ಗುಣವಾದ ಎರಡನೇ ವ್ಯಕ್ತಿ ಪತ್ತೆ

(1ನೇ ಪುಟದಿಂದ) ಉಂಟಾಗುವುದನ್ನು ತಡೆಯಬಹುದು. ಆದರೆ, ಈಗಾಗಲೇ ದೇಹದಲ್ಲಿ ಸಂಗ್ರಹವಾಗಿರುವ ವೈರಸ್‌ಗಳನ್ನು ನಿವಾರಿಸಲು ಸಾಧ್ಯವಿಲ್ಲ. ಎ. ಆರ್.ಟಿ. ಚಿಕಿತ್ಸೆಯನ್ನು ಪ್ರತಿನಿತ್ಯ ಪಡೆಯಬೇಕಾಗುತ್ತದೆ.

ಆದರೆ, ಕೆಲ ವ್ಯಕ್ತಿಗಳ ರೋಗ ನಿರೋಧಕ ವ್ಯವಸ್ಥೆ ಬೇರೆ ರೀತಿಯದ್ದಿದ್ದು, ಇವರು ಯಾವುದೇ ಔಷಧಿ ಇಲ್ಲದೇ ಹೆಚ್.ಐ.ವಿ. ಹತ್ತಿಕ್ಕಬಲ್ಲರು ಎಂಬುದು ಕಂಡು ಬಂದಿದೆ. ಇವರಲ್ಲಿ ಹೆಚ್.ವೈ.ವಿ. ವೈರಸ್ ಸಂಗ್ರಹ ಇರುತ್ತದೆ ಹಾಗೂ ಹೊಸ ವೈರಸ್ ಸಹ ಉತ್ಪಾದನೆಯಾಗುತ್ತದೆ. ಆದರೆ, ಅವರ ದೇಹದಲ್ಲಿರುವ ಟಿ ಸೆಲ್ ಎಂಬ ರೋಗ ನಿರೋಧಕ ಕಣಗಳು ಔಷಧವಿಲ್ಲದೇ ವೈರಸ್‌ಗಳನ್ನು ಹತ್ತಿಕ್ಕುತ್ತವೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಹೆಚ್.ಐ.ವಿ. ಸೋಂಕು ನಿವಾರಿಸಿಕೊಂಡ ಮೊದಲ ವ್ಯಕ್ತಿಯ ವಿವರಗಳು ನೇಚರ್ ನಿಯತಕಾಲಿಕದಲ್ಲಿ 2020ರಲ್ಲಿ ಪ್ರಕಟವಾಗಿದ್ದವು. ಈ ವ್ಯಕ್ತಿ ಸ್ಯಾನ್ ಫ್ರಾನ್ಸಿಸ್ಕೋದವರಾಗಿದ್ದರು.

# ಬೋರ್ಡ್ ಪರೀಕ್ಷೆಯಾಗಿ ಪಿಯು ಅರ್ಧ ವಾರ್ಷಿಕ ಪರೀಕ್ಷೆ





(1ನೇ ಪುಟದಿಂದ) ಕೇವಲ 15 ದಿನಗಳಲ್ಲಿ ರಾಜ್ಯದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪರೀಕ್ಷೆಗೆ ತಯಾರಾಗಬೇಕಿದ್ದು, ಗೊಂದಲಕ್ಕೆ ಸಿಲುಕಿಸಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು. ಕೋವಿಡ್ ಸಾಂಕ್ರಾಮಿಕದ ಹಿನ್ನೆಲೆಯಲ್ಲಿ ಪ್ರಸ್ತುತ ದ್ವಿತೀಯ ಪಿಯುಸಿ, ಮೊದಲ ಪಿಯು ಪರೀಕ್ಷೆಗಳನ್ನು ಬರೆಯದೇ ಬಡ್ತಿ ಹೊಂದಿದ್ದಾರೆ. ಎರಡು ವರ್ಷಗಳು ಪರೀಕ್ಷೆಗಳನ್ನು ಬರೆಯಲು ಆಗದೇ ಬರವಣಿಗೆ ಅಭ್ಯಾಸ ಇರದೇ ಪ್ರಸ್ತುತ ಎರಡನೇ ಪಿಯುಸಿಗೆ ತೇರ್ಗಡೆ ಆಗಿದ್ದಾರೆ. ದ್ವಿತೀಯ ಪಿಯು ಶೈಕ್ಷಣಿಕ ವೇಳಾಪಟ್ಟಿ ಪ್ರಕಾರ ಮೇ 3ನೇ ವಾರ ತರಗತಿಗಳು ಆರಂಭವಾಗಿ ಮಾರ್ಚ್ 3ನೇ ವಾರಕ್ಕೆ ಅಂತಿಮ ಪರೀಕ್ಷೆಗಳು ನಡೆಯುತ್ತವೆ. ಈಗ ಕೋವಿಡ್ ಹಿನ್ನೆಲೆಯಲ್ಲಿ ತರಗತಿಗಳು ಆರಂಭವಾಗಿದ್ದೇ ಆಗಸ್ಟ್ 3ನೇ ವಾರಕ್ಕೆ. ಆದರೆ ಇದೀಗ ಮುಂಬರುವ ಏಪ್ರಿಲ್‌ಗೆ ಅಂತಿಮ ಪರೀಕ್ಷೆಗಳು ನಡೆಯುತ್ತವೆ ಎಂದು ಹೇಳಲಾಗಿದೆ. ಕಾಲೇಜು ಪುನರಾರಂಭವಾಗಲು ಮೂರು ತಿಂಗಳು ವಿಳಂಬವಾಗಿದೆ. ಇದರಿಂದ ತಯಾರಿ ಸಮಯ, ಪಾಠದ ಸಮಯ ಎಲ್ಲವೂ ಕುಗ್ಗಿದೆ. ಹೀಗಾಗಿ ರಾಜ್ಯದ ಹಲವು ಕಾಲೇಜುಗಳಲ್ಲಿ ಪಠ್ಯಕ್ರಮ ಪೂರ್ಣಗೊಂಡಿಲ್ಲ. ಪರೀಕ್ಷೆಗೆ ಸಮರ್ಪಕವಾದ ತಯಾರಿ ನಡೆಸಲು ಸಾಧ್ಯವಾಗಿಲ್ಲ. ರಾಜ್ಯ ಸರ್ಕಾರದ ಅರ್ಧ ವಾರ್ಷಿಕ ಬೋರ್ಡ್ ಪರೀಕ್ಷೆ ರೀತಿ ನಡೆಯುತ್ತದೆ ಎಂಬ ಹಠಾತ್ ನಿರ್ಧಾರವು ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಪೋಷಕರಲ್ಲಿ ಅತೀವ ಆತಂಕ ಸೃಷ್ಟಿಸಿದೆ ಎಂದು ಆಕ್ಷೇಪಿಸಿದರು.

ರಾಜ್ಯ ಸರ್ಕಾರ, ವಿದ್ಯಾರ್ಥಿಗಳ ಭವಿಷ್ಯ, ಮಾನಸಿಕ ಆರೋಗ್ಯ ಹಾಗೂ ಪೋಷಕರು, ಉಪನ್ಯಾಸಕರ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು, ಯಥಾಪ್ರಕಾರ ಪ್ರತಿ ವರ್ಷದಂತೆ ಅಂತಿಮ ಪರೀಕ್ಷೆಯನ್ನು ಮಾತ್ರ ಪಬ್ಲಿಕ್ ಪರೀಕ್ಷೆಯಾಗಿ ಮಾಡಿ, ಜೂನ್ ತಿಂಗಳಿಗೆ ನಿಗದಿಪಡಿಸಬೇಕು. ಅರ್ಧ ವಾರ್ಷಿಕ ಪರೀಕ್ಷೆಯನ್ನು ಕಾಲೇಜು ಮಟ್ಟದಲ್ಲಿ, ವಿಕೇಂದ್ರೀಕೃತ ಪ್ರಕ್ರಿಯೆಯಲ್ಲಿ ನಡೆಸಬೇಕು ಎಂದು ಎಐಡಿಎಸ್‌ಓ ಹಾಗೂ ರಾಜ್ಯದ ವಿದ್ಯಾರ್ಥಿಗಳು ಶಿಕ್ಷಣ ಸಚಿವರನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಕಾರ್ಯದರ್ಶಿ ಪೂಜಾ ನಂದಿಹಳ್ಳಿ, ಪುಷ್ಪಾ, ಕಾವ್ಯ, ಧನುಷ್, ಗಣೇಶ್ ಸೇರಿದಂತೆ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ನಿರ್ದೇಶಕರಾಗಿ ಓಂಕಾರಪ್ಪ



ದಾವಣಗೆರೆ, ನ.16- ಭಾರತ ಸರ್ಕಾರದ ವಿದ್ಯುತ್ ಸಚಿವಾಲಯದ ಅಧೀನದಲ್ಲಿರುವ (ಮಹಾರತ್ನ ಕಂಪನಿ) ಸಾರ್ವಜನಿಕ ವಲಯದ ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್‌ಗೆ ಆಡಳಿತ ಮಂಡಳಿಯ ನಿರ್ದೇಶಕರಾಗಿ ಚೇತನ ವಿದ್ಯಾಸಂಸ್ಥೆಯ ಅಧ್ಯಕ್ಷ ಕೆ.ಎನ್. ಓಂಕಾರಪ್ಪ ನೇಮಕಗೊಂಡಿದ್ದಾರೆ.

## ಕನಗೊಂಡನಹಳ್ಳಿ : ಪ್ರಾಣ ಪ್ರತಿಷ್ಠಾಪನೆ

ಶ್ರೀ ಮಹೇಶ್ವರ ಸ್ವಾಮಿ, ಶ್ರೀ ನಂದೀಶ್ವರ ಸ್ವಾಮಿ, ಶಿಲಾಮೂರ್ತಿ ಸ್ಥಾಪನೆ, ಪ್ರಾಣ ಪ್ರತಿಷ್ಠಾಪನೆ ಹಾಗೂ ಧಾರ್ಮಿಕ ಸಮಾರಂಭವು ಇಂದು ನಡೆಯಲಿದೆ. ಇಂದು ಪ್ರಾತಃಕಾಲ ಶ್ರೀ ರುದ್ರಾಭಿಷೇಕ, ಶಿವಾಷ್ಟೋತ್ತರ ಶತ ನಾಮಾವಳಿ ಪೂಜೆ ನಡೆಯುವುದು. ನಂತರ ಬೆಳಿಗ್ಗೆ 9 ಕ್ಕೆ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಪ್ರಾಣ ಪ್ರತಿಷ್ಠಾಪನೆ ನೆರವೇರಿಸುವರು. ದಾಸೋಹ ನಡೆಯುವುದು.

## ನಿಮಿಷಾಂಬ ದೇವಸ್ಥಾನದಲ್ಲಿ ಇಂದು

**ದಾವಣಗೆರೆ :** ಹಳೇ ಕಚೇರಿ ರಸ್ತೆಯಲ್ಲಿರುವ ಚಿತ್ರಗಾರ ಗಲ್ಲಿಯ ಶ್ರೀ ನಿಮಿಷಾಂಬ ದೇವಿಯ 63ನೇ ಪ್ರತಿಷ್ಠಾಪನಾ ಮಹೋತ್ಸವವು ಇಂದು ನಡೆಯಲಿದೆ. ಇಂದು ಬೆಳಗಿನ ಜಾವ ದೇವಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ಮಹಾಪೂಜೆ, ಬೆಳಿಗ್ಗೆ 7 ರಿಂದ ಉಪನಯನ, 8 ಗಂಟೆಗೆ ದೇವತಾ ಪ್ರಾರ್ಥನೆ, ಮಹಾಸಂಕಲ್ಪ ಸೇರಿದಂತೆ ಅನೇಕ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಗುವುದು. ಕಲಾಹೋಮವನ್ನು ನಡೆಸಲಾಗುವುದು. ಬೆಳಿಗ್ಗೆ 10.30 ಕ್ಕೆ ದೇವಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಲಾಗುವುದು.

# ನಾಸ್ತಿಕನಾಗಿ ಬಾಳುವುದಕ್ಕಿಂತ ಆಸ್ತಿಕನಾಗಿ ಬಾಳುವುದು ಶ್ರೇಷ್ಠ

## ಸಾಲಕಟ್ಟೆ ದೇವಾಲಯ ಕಳಸಾರೋಹಣದಲ್ಲಿ ಶ್ರೀಶೈಲ ಪೀಠದ ಜಗದ್ಗುರುಗಳ ಅಭಿಮತ

ಮಲೇಬೆನ್ನೂರು, ನ.16- ಭಾರತ, ಧರ್ಮ ಪ್ರಧಾನವಾದ ದೇಶವಾಗಿದ್ದು, ಇಲ್ಲಿರುವಷ್ಟು ದೇವಾಲಯಗಳನ್ನು ಬೇರೆ ಯಾವ ದೇಶಗಳಲ್ಲಿ ನೋಡಲು ಸಾಧ್ಯವಿಲ್ಲ ಎಂದು ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಭಗವತ್ಪಾದಂಗಳವರು ಹೇಳಿದರು.

ಸಾಲಕಟ್ಟೆ ಗ್ರಾಮದಲ್ಲಿ ನಿನ್ನೆ ಏರ್ಪಾಡಾಗಿದ್ದ ಸಮಾರಂಭದಲ್ಲಿ ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಗೋಪುರಕ್ಕೆ ಕಳಸಾ ರೋಹಣ ನೆರವೇರಿಸಿ, ಜನಜಾಗೃತಿ ಧಾರ್ಮಿಕ ಸಮಾರಂಭದ ನೇತೃತ್ವ ವಹಿಸಿ ಜಗದ್ಗುರುಗಳು ಆಶೀರ್ವಚನ ನೀಡಿದರು.



ಭಾರತೀಯರ ಹೃದಯದಲ್ಲಿ ದೇವರು ವಾಸವಾಗಿದ್ದಾನೆಂದು ಹೇಳಲು ನಮಗೆ ಸಂತಸವಾಗುತ್ತದೆ. ದೇವರು ಇರುವುದು ಸತ್ಯ. ದೇವರು ಇದ್ದಾನೆ ಎನ್ನುವವರಿಗೆ ಇದ್ದಾನೆ, ದೇವರಿಲ್ಲ ಎನ್ನುವವರು ದೇವರ ಅನುಗ್ರಹದಿಂದ ವಂಚಿತರಾಗುತ್ತಾರೆ. ನಾಸ್ತಿಕರಾಗಿ ಬಾಳುವುದಕ್ಕಿಂತ ಆಸ್ತಿಕರಾಗಿ ಬಾಳುವುದು ಶ್ರೇಷ್ಠ. ಭಾರತ ದೇಶ ಅಧ್ಯಾತ್ಮದ ತವರೂರಾಗಿದ್ದು, ಇಲ್ಲಿಯ ಧರ್ಮ ಮತ್ತು ಸಂಸ್ಕೃತಿ ಅತ್ಯಂತ ಉತ್ಕೃಷ್ಟವಾಗಿದೆ. ಅವುಗಳನ್ನು ಉಳಿಸಿ, ಬೆಳೆಸಲು ಇಂತಹ ಕಾರ್ಯಕ್ರಮಗಳು ದೇಶದಲ್ಲಿ ಸದಾಕಾಲ ನಡೆಯುತ್ತಿರಬೇಕೆಂದು ಶ್ರೀಗಳು ತಿಳಿಸಿದರು.

ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಮಾತನಾಡಿ, ಪಂಚಪೀಠಗಳು ವೀರಶೈವ ಲಿಂಗಾಯತ ಧರ್ಮದ ಮೂಲಪೀಠಗಳಾಗಿವೆ. ರಾಜಕೀಯ ಅಧಿಕಾರ ಅಥವಾ ತಮ್ಮ ಜಾತಿಯ ಜನರ ಉದ್ಧಾರಕ್ಕಾಗಿ ಪಾದಯಾತ್ರೆ ಮಾಡುವವರನ್ನು ನೋಡಿದ್ದೇವೆ. ಆದರೆ, ಶ್ರೀಶೈಲ ಜಗದ್ಗುರುಗಳು ಸರ್ವರ ಕಲ್ಯಾಣಕ್ಕಾಗಿ ಬೆಳಗಾವಿ ಜಿಲ್ಲೆಯ ಯಡ್ಯೂರಿನಿಂದ ಶ್ರೀಶೈಲದವರೆಗೆ ಸಾವಿರಾರು ಕಿ.ಮೀ. ಪಾದಯಾತ್ರೆ ಮಾಡಿ ಮಾದರಿಯಾಗಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಗ್ರಾಮದ ಹಿರಿಯರಾದ ಡಿ.ಎಂ. ಹಾಲಸ್ವಾಮಿ ಧರ್ಮಸಭೆಯ ಅಧ್ಯಕ್ಷತೆ ವಹಿಸಿದ್ದರು. ವೇದಿಕೆಯಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಪಿ. ಮಂಜುನಾಥ, ಬಿಜೆಪಿ ಮುಖಂಡ ಚಂದ್ರಶೇಖರ ಪೂಜಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಎಸ್. ಚಂದ್ರಪ್ಪ, ಗ್ರಾಮದ ಮುಖಂಡರಾದ ಆರ್.ಸಿ. ಬಸವರಾಜಪ್ಪ, ಕಡೇಮನಿ ಯೋಗಪ್ಪ, ಗ್ರಾ.ಪಂ. ಉಪಾಧ್ಯಕ್ಷೆ ಜ್ಯೋತಿ ನಾಗರಾಜ್, ಸದಸ್ಯರಾದ ದೀಪಾ ನಿರಂಜನ್, ಅನುಪಮ ಸಿದ್ದಪ್ಪ, ಸೇವಾ ಸಮಿತಿಯ ಎಸ್.ಜಿ. ಶರಣಪ್ಪ, ಟಿ.ಎಂ. ಮಹೇಶ್ವರಯ್ಯ, ಎಸ್.ಜಿ. ಮಂಜುನಾಥ, ಭಾನುವಳ್ಳಿ ರಾಜಪ್ಪ, ಕಮಲಾಪುರದ ರುದ್ರಪ್ಪ, ಡಿ.ಎಂ. ಜಯದೇವಯ್ಯ, ಕೆ.ಎನ್. ಮಂಜುನಾಥ, ಡಿ.ಹೆಚ್. ರೇವಣಸಿದ್ದಪ್ಪ, ಇಟಗಿ ಶಿವಾನಂದಪ್ಪ, ಎಸ್.ಜಿ. ಕುಬೇರಗೌಡ, ಕೆ.ಆರ್. ಮಂಜುನಾಥ ಇದ್ದರು.

ಶಿಕ್ಷಕ ಆರ್.ಬಿ. ಮಲ್ಲಿಕಾರ್ಜುನ ಸ್ವಾಗತಿಸಿದರು. ಉಪನ್ಯಾಸಕ ಎಸ್.ಜಿ. ಸುನೀಲ್ ಕುಮಾರ್ ವಂದಿಸಿದರು.

# ದೂಡಾ ನಿವೇಶನ ಅಕ್ರಮ ಹಂಚಿಕೆ



## ಶ್ರೀರಾಮ ಸೇನೆ ಪ್ರತಿಭಟನೆ

ದಾವಣಗೆರೆ, ನ.16- ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದಿಂದ 2017ರಲ್ಲಿ ಅಕ್ರಮವಾಗಿ ನಿವೇಶನ ಹಂಚಿಕೆಯ ಸಂಪೂರ್ಣವಾಗಿ ತನಿಖೆ ನಡೆಸಿ, ತಪ್ಪಿಸ್ಥರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಶ್ರೀರಾಮ ಸೇನೆ ಜಿಲ್ಲಾ ಘಟಕದ ವತಿಯಿಂದ ನಗರದ ದೂಡಾ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು.

ದೂಡಾದಿಂದ 2009ರಲ್ಲಿ ಅಕ್ರಮವಾಗಿ ನಿವೇಶನ ಹಂಚಿದ್ದರಿಂದ ಶ್ರೀರಾಮ ಸೇನೆ ವತಿಯಿಂದ ಸುಮಾರು 90 ಪ್ರಕರಣಗಳನ್ನು ಸಲ್ಲಿಸಿದ್ದೆವು. ಅವುಗಳು ಬೆಂಗಳೂರಿನ ವಿಶೇಷ ಜನಪ್ರತಿನಿಧಿಗಳ ನ್ಯಾಯಾಲಯದಲ್ಲಿ ವಿಚಾರಣೆ ನಡೆದಿವೆ. ಅದೇ ರೀತಿ 2012ರಲ್ಲಿ ನಿವೇಶನ ಹಂಚಿಕೆಗಾಗಿ ಪ್ರಕಟಿಸಿದ್ದು, ಅವುಗಳನ್ನು 2017ರಲ್ಲಿ ಅಕ್ರಮವಾಗಿ ಮತ್ತು ಕಾನೂನು ಬಾಹಿರವಾಗಿ ಹಂಚಿಕೆ ಮಾಡಿ ಭ್ರಷ್ಟಾಚಾರ ಎಸಗಿರುವುದಾಗಿ ಸಂಘಟನೆಯ ಜಿಲ್ಲಾಧ್ಯಕ್ಷ ಮಣಿ ಸರ್ಕಾರ್ ಆಪಾದಿಸಿದರು.

ಈ ಪ್ರಕರಣಗಳಲ್ಲಿ ಎಲ್ಲಾ ರಾಜಕೀಯ ಮತ್ತು ಸರ್ಕಾರಿ ನೌಕರರು ಸುಳ್ಳು ಮಾಹಿತಿ ನೀಡಿ ನಿವೇಶನಗಳನ್ನು ಪಡೆದುಕೊಂಡಿದ್ದಾರೆ. ಆ ಎಲ್ಲಾ ಪ್ರಕರಣಗಳಲ್ಲಿ ಸ್ವಹಿತಾಸಕ್ತಿ ಮತ್ತು ಸ್ವಜನ ಪಕ್ಷಪಾತ, ತಮ್ಮ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಅವರು ದೂರಿದರು.

ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಮತ್ತು ಅವರ ಸಹೋದರರು, ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಅವರ ಸಹೋದರರು, ಹಿಂದಿನ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು, ಆಯುಕ್ತರು, ಅಧಿಕಾರಿಗಳು, ದೂಡ ಸದಸ್ಯರು ಸೇರಿಕೊಂಡು ಭ್ರಷ್ಟಾಚಾರ ಎಸಗಿದ್ದಾರೆ. ಈ ವಿಚಾರವಾಗಿ ತನಿಖೆ ನಡೆಸಿ, ಸೂಕ್ತ ಕಾನೂನು ಕ್ರಮಕೈಗೊಳ್ಳಲು ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಅವರು ಮನವಿ ಮಾಡಿದರೂ ಸಹ ಸರ್ಕಾರ ಇಲ್ಲಿಯವರೆಗೂ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಂಡಿಲ್ಲ ಎಂದು ಅವರು ಕಿಡಿ ಕಾರಿದರು.

ಪ್ರತಿಭಟನೆಯಲ್ಲಿ ಶ್ರೀರಾಮ ಸೇನೆ ನಗರ ಅಧ್ಯಕ್ಷ ಬಿ.ಜಿ. ರಾಹುಲ್, ಜಿಲ್ಲಾ ಉಪಾಧ್ಯಕ್ಷ ಆಲೂರು ರಾಜಶೇಖರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಾಗರ್, ನಗರ ಉಪಾಧ್ಯಕ್ಷ ರಾಜು, ದಾವಣಗೆರೆ ದಕ್ಷಿಣ ವಲಯದ ಅಧ್ಯಕ್ಷ ಶಿಬಾರ್ ರಮೇಶ್, ಜಿಲ್ಲಾ ಖಜಾಂಚಿ ಶ್ರೀಧರ್, ಉತ್ತರ ವಲಯದ ಅಧ್ಯಕ್ಷ ವಿನೋದ ವೆರ್ಣೇಕರ್, ಜಿಲ್ಲಾ ಹೋರಾಟ ಪ್ರಮುಖ್ ಕರಾಟೆ ರಮೇಶ್, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಡಿ.ಬಿ. ವಿನೋದರಾಜ್, ಜಿಲ್ಲಾ ವ್ಯವಸ್ಥಾಪಕ ಸುನೀಲ್ ವಾಲಿ, ಮಹೇಶ್, ರಘು, ಮಾರ್ಕಂಡೇಯ ಸೇರಿದಂತೆ ಇತರರು ಭಾಗವಹಿಸಿದ್ದರು.

## ಲಸಿಕೆಯಿಂದ ಉದ್ಯೋಗ ಕಳೆದುಕೊಂಡರೆ ಹೊಣೆಯಿಲ್ಲವೇ?

### ಕೇಂದ್ರ ಸರ್ಕಾರಕ್ಕೆ ಕೇರಳ ಹೈಕೋರ್ಟ್ ಪ್ರಶ್ನೆ

ಕೊಚ್ಚಿ, ನ. 16 – ಸರ್ಕಾರ ಲಸಿಕೆ ನೀಡಿದ ಕಾರಣಕ್ಕಾಗಿ ಯಾರಾದರೂ ಉದ್ಯೋಗ ಕಳೆದುಕೊಂಡರೆ, ಈ ಸಮಸ್ಯೆ ಬಗೆಹರಿಸುವುದು ಸರ್ಕಾರದ ಹೊಣೆಯಲ್ಲವೇ? ಎಂದು ಕೇರಳ ಹೈಕೋರ್ಟ್ ಕೇಂದ್ರ ಸರ್ಕಾರವನ್ನು ಪ್ರಶ್ನಿಸಿದೆ.

ವ್ಯಕ್ತಿಯೋರ್ವ ಕೊವ್ಯಾಕ್ಸಿನ್ ಲಸಿಕೆ ಪಡೆದಿದ್ದ. ಕೊವ್ಯಾಕ್ಸಿನ್ ಲಸಿಕೆಗೆ ಈಗ ಡಬ್ಲ್ಯೂ.ಹೆಚ್.ಓ. ಮಾನ್ಯತೆ ಸಿಕ್ಕಿದ್ದರೂ ಸಹ, ಸೌದಿ ಅರೇಬಿಯಾ ಮಾನ್ಯತೆ ಇಲ್ಲ. ಹೀಗಾಗಿ ಅಲ್ಲಿಗೆ ತೆರಳಲು ಸಾಧ್ಯವಾಗುವ ರೀತಿಯಲ್ಲಿ ಸೌದಿಯಲ್ಲಿ ಮಾನ್ಯತೆ ಪಡೆದಿರುವ ಲಸಿಕೆಯ ಮೂರನೇ ಡೋಸ್ ನೀಡುವಂತೆ ವ್ಯಕ್ತಿ ಹೈಕೋರ್ಟ್ ಮೊರೆ ಹೋಗಿದ್ದಾನೆ.

ಈ ಬಗ್ಗೆ ವಿಚಾರಣೆ ನಡೆಸಿರುವ ನ್ಯಾಯಮೂರ್ತಿ ಪಿ.ವಿ. ಉನ್ನಿಕೃಷ್ಣನ್, ಈ ವಿಷಯದಲ್ಲಿ ಕೇಂದ್ರ ಸರ್ಕಾರವನ್ನು ದೂಷಿಸುತ್ತಿಲ್ಲ. ಆದರೆ, ಸರ್ಕಾರ ನೀಡಿದ ಲಸಿಕೆಯಿಂದಾಗಿ ವ್ಯಕ್ತಿಯೊಬ್ಬರು ಉದ್ಯೋಗ ಕಳೆದುಕೊಂಡರೆ ಇಲ್ಲವೇ ಅವರ ಚಲನವಲನದ ಮೇಲೆ ನಿರ್ಬಂಧ ಹೇರಿದರೆ ಅದನ್ನು ಬಗೆಹರಿಸುವುದು ಸರ್ಕಾರದ ಹೊಣೆಯಾಗುವುದಿಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ಕೊವ್ಯಾಕ್ಸಿನ್ ಲಸಿಕೆಗೆ ಡಬ್ಲ್ಯೂ.ಹೆಚ್.ಓ. ಮಾನ್ಯತೆ ನೀಡಿದ್ದರೂ ಸೌದಿ ಅರೇಬಿಯಾ ಏಕೆ ಮಾನ್ಯತೆ ನೀಡುತ್ತಿಲ್ಲ ಎಂಬ ಬಗ್ಗೆ ಕೇಂದ್ರದ ವರದಿ ಸಲ್ಲಿಸುವಂತೆ ಅಸಿಸ್ಟೆಂಟ್ ಸಾಲಿಸಿಟರ್ ಜನರಲ್ ಎಸ್. ಮನು ಅವರಿಗೆ ನ್ಯಾಯಾಲಯ ತಿಳಿಸಿದೆ.

ಈ ಬಗ್ಗೆ ಸರ್ಕಾರದ ಪರವಾಗಿ ವಾದ ಮಂಡಿಸಿದ್ದ ಮನು, ಕೊರೊನಾ ಸಮಯದಲ್ಲಿ ಜೀವ ಉಳಿಸುವ ಸಲುವಾಗಿ ಲಸಿಕೆ ನೀಡಲಾಗಿತ್ತು. ಹೀಗಾಗಿ ಸರ್ಕಾರ ಲಸಿಕೆಗೆ ಅಂತರರಾಷ್ಟ್ರೀಯ ಮಾನ್ಯತೆ ಸಿಗುವವರೆಗೂ ಕಾಯಲಿಲ್ಲ. ವಿದೇಶಗಳ ಮೇಲೆ ಯಾವುದಾದರೂ ವಿಷಯ ಹೇರುವುದಕ್ಕೆ ಸರ್ಕಾರದ ಮಿತಿಗಳಿವೆ ಎಂದಿದ್ದರು. ಆದರೆ, ಸರ್ಕಾರ ನೀಡಿದ ಲಸಿಕೆಯ ಕಾರಣದಿಂದಾಗಿ ಯಾವುದೇ ವ್ಯಕ್ತಿ ಉದ್ಯೋಗ ಕಳೆದುಕೊಂಡರೆ ಇಲ್ಲವೇ ಚಲನವಲನದ ಮೇಲೆ ನಿರ್ಬಂಧವಾದರೆ ಅದು ಮೂಲಭೂತ ಹಕ್ಕುಗಳ ಉಲ್ಲಂಘನೆ ಎಂದು ನ್ಯಾಯಾಲಯ ಹೇಳಿದೆ. ನವೆಂಬರ್ 29ರಂದು ನ್ಯಾಯಾಲಯ ಮುಂದಿನ ವಿಚಾರಣೆ ನಡೆಸಲಿದೆ.

# ಶಾಲಾ ಮಕ್ಕಳಿಗೆ ಸಂಚಾರ ನಿಯಮಗಳ ಪಾಠ ಮಾಡಿದ ಪಿಎಸ್‌ಐ ಜಯಶೀಲಾ





ದಾವಣಗೆರೆ, ನ.16- ನಗರದ ರೈತರ ಭವನದ ಸಮೀಪದಲ್ಲಿರುವ ದಾವಣಗೆರೆ ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಸೋಮವಾರ ಠಾಣೆಯ ಮಹಿಳಾ ಪಿಎಸ್ಐ ಜಯಶೀಲಾ ಅವರು ಜಗಳೂರು ತಾಲ್ಲೂಕಿನ ಹೊಸಕೆರೆಯಲ್ಲಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಸಂಚಾರ ನಿಯಮಗಳ ಬಗ್ಗೆ ಪಾಠ ಮಾಡಿ, ಅವರಲ್ಲಿ ಸಂಚಾರ ನಿಯಮಗಳ ಪಾಲನೆ ಬಗ್ಗೆ ಜಾಗೃತಿ ಮೂಡಿಸಿದರು.

ಸಂಚಾರ ನಿಯಮಗಳೇನೇನು, ಅವುಗಳ ಪಾಲನೆ ಹೇಗೆ, ನಿಯಮ ಉಲ್ಲಂಘನೆಯಿಂದಾಗುವ ಅಪಾಯ, ಅನಾಹುತ ಹಾಗೂ ಉಲ್ಲಂಘನೆಗೆ ಕ್ರಮವೇನು ಎಂಬಿತ್ಯಾದಿಗಳ ಬಗ್ಗೆ ಮನಮುಟ್ಟುವಂತೆ ವಿವರಣೆ ನೀಡುತ್ತಾ, ತಿಳುವಳಿಕೆ ಮೂಡಿಸಿದರು.

ಕೇರಳ ಸರ್ಕಾರದ ಮಾದರಿಯಲ್ಲಿ ನಮ್ಮ ರಾಜ್ಯದಲ್ಲೂ ವಿದ್ಯಾರ್ಥಿಗಳಲ್ಲಿ ಶಿಸ್ತು, ಅರಿವು, ನಾಯಕತ್ವದ ಗುಣ, ನಾಗರಿಕ ಜ್ಞಾನ ಮೂಡಿಸುವ ಉದ್ದೇಶದಿಂದ ಸ್ಟೂಡೆಂಟ್ ಪೊಲೀಸ್ ಕೆಡೆಟ್(ಎಸ್‌ಪಿಸಿ) ಯೋಜನೆಯಡಿ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳಲ್ಲಿ ವಾರಕ್ಕೊಮ್ಮೆ ಶಾಲಾ ಅವಧಿ ಮುಗಿದ ಬಳಿಕ ಪೊಲೀಸ್ ಠಾಣೆ ಮತ್ತು ಕಾರ್ಯ ಹಾಗೂ ಠಾಣೆಗಳಿಂದ ಸಾರ್ವಜನಿಕ ಸೇವೆಗಳು ಸೇರಿದಂತೆ ಅಪರಾಧ ಅರಿವಿನ ಬಗ್ಗೆ ಅಗತ್ಯ ಬೋಧನೆ ನೀಡಲಾಗುತ್ತದೆ ಎಂದು ಶಿವಮೊಗ್ಗದ 8ನೇ ಕೆಎಸ್‌ಆರ್‌ಪಿ ಠಾಣೆಯ ತರಬೇತುದಾರ ಕೆ.ಜೆ. ವೆಂಕಟೇಶ್ ಮಾಹಿತಿ ನೀಡಿದರು.

ದಕ್ಷಿಣ ಸಂಚಾರ ಪೊಲೀಸ್ ಠಾಣೆಯ ಎಎಸ್ಐ ಸುಭಾಷ್ ಅವರು ಸಂಚಾರ ನಿಯಮ ಉಲ್ಲಂಘನೆಯಿಂದ ಸಂಭವಿಸುವ ಅಪಘಾತ, ಜೀವ ಹಾನಿ ಬಗ್ಗೆ ಮಕ್ಕಳಿಗೆ ವಿವರಿಸಿದರು.

## ಕರಾಮುವಿ ಸರ್ಟಿಫಿಕೇಟ್ ಕೋರ್ಸ್ ಪ್ರವೇಶಾತಿಗೆ ನಾಳೆ ಕೊನೆಯ ದಿನ

ದಾವಣಗೆರೆ, ನ.16- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 2021-22ರ ಜುಲೈ (ನವೆಂಬರ್) ಸಾಲಿನ ಪ್ರಥಮ ವರ್ಷದ ಬಿಎ, ಬಿಕಾಂ, ಬಿಎಲ್‌ಐ.ಎಸ್‌ಸಿ, ಬಿಬಿಎ, ಬಿಎಸ್‌ಸಿ, ಬಿಸಿಎ, ಎಂ.ಎ, ಎಂಕಾಂ, ಎಂಬಿಎ, ಎಂಎಲ್.ಐ.ಎಸ್‌ಸಿ, ಡಿಪ್ಲೊಮಾ, ಡಿಪ್ಲೊಮಾ ಸರ್ಟಿಫಿಕೇಟ್ ಕೋರ್ಸ್‌ನ ಅಧ್ಯಯನ ವಿಷಯಗಳ ಪ್ರವೇಶಾತಿಗೆ ಯಾವುದೇ ದಂಡ ಶುಲ್ಕವಿಲ್ಲದೆ ಪ್ರವೇಶಾತಿ ಪಡೆಯಲು ನಾಡಿದ್ದು ದಿನಾಂಕ 18 ಕೊನೆಯ ದಿನವಾಗಿದೆ.

ಮಾಹಿತಿಗೆ ವಿಶ್ವವಿದ್ಯಾನಿಲಯ ವೆಬ್‌ಸೈಟ್ www.ksoumysuru.ac. in ಅಥವಾ ದೂರವಾಣಿ ಸಂಖ್ಯೆ 9916009318, 8095939359, 9008905457 ಕ್ಕೆ ಸಂಪರ್ಕಿಸಬಹುದು ಅಥವ ಪ್ರಾದೇಶಿಕ ಕೇಂದ್ರಕಚೇರಿಗೆ ಖುದ್ದಾಗಿ ಭೇಟಿ ನೀಡಬಹುದು ಎಂದು ವಿವಿ ಪ್ರಾದೇಶಿಕ ನಿರ್ದೇಶಕ ಡಾ.ವಿಜಯ್‌ಪ್ರಕಾಶ್ ತಿಳಿಸಿದ್ದಾರೆ.

## ಹೊಸಕುಂದವಾಡ

ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಶ್ರೀ ಗಣೇಶ, ಶ್ರೀ ಅಯ್ಯಪ್ಪ ಸ್ವಾಮಿ, ಶ್ರೀ ಷಣ್ಮುಖ, ಶ್ರೀ ಆಂಜನೇಯ, ನವಗ್ರಹ ಪ್ರತಿಷ್ಠಾಪನೆಯು ಇಂದು ಬೆಳಿಗ್ಗೆ 8-15ಕ್ಕೆ ನಡೆಯಲಿದೆ.

## ಮರಣೋತ್ತರ ಕರ್ನಾಟಕ ರತ್ನ

**(1ನೇ ಪುಟದಿಂದ)** ರಾಷ್ಟ್ರಮಟ್ಟದ ಪ್ರಶಸ್ತಿಗಳಿಗೂ ಪುನೀತ್ ಭಾಜನರಾಗುವ ಬಗ್ಗೆ ಚಿಂತನೆ ನಡೆಸಲಾಗುವುದು. ಡಾ ರಾಜ್‌ಕುಮಾರ್ ಸ್ಮಾರಕದಂತೆ ಪುನೀತ್ ಸ್ಮಾರಕವನ್ನೂ ನಿರ್ಮಿಸಲಾಗುವುದು ಎಂದು ಸಿಎಂ ತಿಳಿಸಿದ್ದಾರೆ.


**ಹೃದಯಪೂರ್ವಕ ಅಭಿನಂದನೆಗಳು**



ಬೆಂಗಳೂರಿನ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ನಾಲ್ಕನೇ ಬಾರಿಗೆ ಚುನಾಯಿತಗೊಂಡಿರುವ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಕಣ್ಣಿನ ವಿಭಾಗದ ಮುಖ್ಯಸ್ಥರು, ಹಿರಿಯ ನೇತ್ರ ತಜ್ಞರಾದ

**ಡಾ|| ರವೀಂದ್ರ ಬಣಕಾರ್** ಅವರಿಗೆ
ಹೃದಯಪೂರ್ವಕ ಅಭಿನಂದನೆಗಳು.

ಶುಭ ಕೋರುವವರು :
**ಎಚ್.ಎನ್. ಶಿವಕುಮಾರ್**
ಬಾಪೂಜಿ ಸ್ಕೂಲ್, ಸಿಬಿಎಸ್‌ಇ, ಎಂಸಿಸಿ ಬಿ ಬ್ಲಾಕ್, ದಾವಣಗೆರೆ.
**ಜಿ.ಬಿ. ನಾಗರಾಜ್**, ತರಳಬಾಳು ಬಡಾವಣೆ, ದಾವಣಗೆರೆ.
ನಟರಾಜ ಪ್ರಾವಿಜನ್ ಸ್ಟೋರ್ಸ್, ನಟರಾಜ ಎಂಟರ್‌ಪ್ರೈಸಸ್, ಚಾಮರಾಜಪೇಟೆ, ದಾವಣಗೆರೆ. ಹಾಗೂ ಸಿಬ್ಬಂದಿ ವರ್ಗ

**ಮೂಲ ಕ್ರಯ ಪತ್ರ ಕಳೆದಿದೆ**

ನನ್ನ ಕಕ್ಷಿದಾರರಾದ **ಕಾಳಪ್ಪ ಬಿನ್ ಫಕ್ಕೀರಪ್ಪ** ದಾವಣಗೆರೆ ವಾಸಿ ಇವರ ಹೆಸರಿಗೆ ಇರುವ ಯರಗುಂಟೆ ಗ್ರಾಮದ ರಿ. ಸ. ನಂ. 12/3ಪಿ ರಲ್ಲಿ ಸೈಟ್ ನಂ. 55, 56, 57 ಡೋರ್ ನಂ. 227 ರ ಪ್ರತಿ ಸೈಟಿನ ಅಳತೆ 20×30 ರ ಕ್ರಯ ಪತ್ರ ಹಾಗೂ ಇತರೆ ದಾಖಲಾತಿಗಳನ್ನು ಕಳೆದುಕೊಂಡಿರುತ್ತಾರೆ. ಯಾರಿಗಾದರೂ ಸಿಕ್ಕಿದಲ್ಲಿ ಕೆಳಗಿನ ವಿಳಾಸಕ್ಕೆ ತಿಳಿಸಬೇಕಾಗಿ ವಿನಂತಿ.

**ಮಹಾದೇವಿ ಸಿ. ಹಿರೇಮಠ್**, ವಕೀಲರು
ಕಾಯಿ ಕಾಂಪೌಂಡ್, ಎ.ವಿ.ಕೆ. ಕಾಲೇಜ್ ರೋಡ್, ದಾವಣಗೆರೆ.

**ಮೊಬೈಲ್ : 87626 20496 / 72593 27745**

**ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.,**
ನಂ. 7-432, ಕುವೆಂಪು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ-577002

**ಪ್ರಕಟಣೆ**
**84ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ಆಹ್ವಾನ ಪತ್ರಿಕೆ**

ಮಾನ್ಯ ಸಹಕಾರಿ ಸದಸ್ಯರೇ, ಮೇಲ್ಕಂಡ ನಮ್ಮ ಬ್ಯಾಂಕಿನ 2020-21ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯನ್ನು ದಿನಾಂಕ 18.11.2021ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಸರಿಯಾಗಿ ಶ್ರೀ ತರಳಬಾಳು ಸಭಾ ಭವನ ಹದಡಿ ರಸ್ತೆ, ದಾವಣಗೆರೆ-577005 ಇಲ್ಲಿ ನಡೆಸಲಾಗುತ್ತಿದ್ದು, ಜನಪ್ರತಿನಿಧಿಗಳನ್ನು ಹೊರತುಪಡಿಸಿ ಎಲ್ಲಾ ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ಕೋರಲಾಗಿದೆ.

**ವಿಶೇಷ ಸೂಚನೆ:** ಈಗಾಗಲೇ ಆಹ್ವಾನ ಪತ್ರಿಕೆಗಳನ್ನು ಕಳುಹಿಸಲಾಗಿದ್ದು, ತಲುಪದಿದ್ದ ಸದಸ್ಯರು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಹಾಜರಾಗಬೇಕಾಗಿ ವಿನಂತಿ.

ಆಡಳಿತ ಮಂಡಳಿ ಪರವಾಗಿ
**ಅಧ್ಯಕ್ಷರು**

**ಬೇಕಾಗಿದ್ದಾರೆ**

Diploma in Hardware Networking / Software ಆದವರು ಬೇಕಾಗಿದ್ದಾರೆ.
ಅನುಭವವುಳ್ಳ ಅಭ್ಯರ್ಥಿಗಳಿಗೆ ಹೆಚ್ಚಿನ ಆದ್ಯತೆ.

ಎ.ಕೆ. ಫಾರ್ಮದಲ್ಲಿ ಸ್ಟಾಕ್ ತೆಗೆಯಲು PUC / Diploma / Degree ಆದ ಉತ್ಸಾಹಿ ಯುವಕರು ಬೇಕಾಗಿದ್ದಾರೆ.
ಆಯ್ಕೆ ಆದ ಅಭ್ಯರ್ಥಿಗಳಿಗೆ, ಆಕರ್ಷಕ ವೇತನ, PF, ESI ಮತ್ತು Gratuity ಸೌಲಭ್ಯಗಳು ಹಾಗೂ ಕಾರ್ಪೊರೇಟ್ ತರಬೇತಿ ಇರುತ್ತದೆ.

**ಸಂಪರ್ಕಿಸಿ : ಎ.ಕೆ. ಫಾರ್ಮ**
ತರಳಬಾಳು ಶಾಲೆ ಎದುರು, ಹದಡಿ ರಸ್ತೆ, ದಾವಣಗೆರೆ.

**ದಾವಣಗೆರೆ ಜಿಲ್ಲಾ ಸರ್ಕಾರಿ ನಿವೃತ್ತ ನೌಕರರ ಸಂಘ (ರಿ.)**
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.

ಮಾನ್ಯರೇ,
2020-2021ನೇ ಸಾಲಿನ ಸರ್ವ ಸದಸ್ಯರ ಸಭೆಯನ್ನು **ದಿನಾಂಕ: 18-11-2021 ರ ಗುರುವಾರ ಬೆಳಿಗ್ಗೆ 11.00 ಘಂಟೆಗೆ ಸರಿಯಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ, ರಿಂಗ್ ರಸ್ತೆ, ನಿಜಲಿಂಗಪ್ಪ ಬಡಾವಣೆ ದಾವಣಗೆರೆ.** ಇಲ್ಲಿ ಕರೆಯಲಾಗಿದೆ. ಸರ್ವಸದಸ್ಯರು ತಪ್ಪದೇ ಸಭೆಗೆ ಹಾಜರಾಗಲು ಕೋರಿದೆ.

ಸಹಿ/- **ಕಾರ್ಯದರ್ಶಿ**, ಕಾರ್ಯಕಾರಿ ಮಂಡಳಿ ಪರವಾಗಿ

**ಸಾರ್ವಜನಿಕ ಪ್ರಕಟಣೆ**

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಷೆಡ್ಯೂಲ್ ಸ್ಥಿರ ಸೊತ್ತು ವಾಸದ ಮನೆಯನ್ನು ನನ್ನ ಕಕ್ಷಿಗಾರರು **ಶ್ರೀಮತಿ ಜಿ. ಹೊನ್ನಮ್ಮ ಕೋಂ ಕೆ.ಎಂ. ಮುನಿಗೋಪಾಲರಾಜು ಮತ್ತು ಶ್ರೀಮತಿ ಪಿ.ಜೆ. ನಾಗರತ್ನಮ್ಮ ಕೋಂ ಲೇಟ್ ಡಾ. ನರೇಶ್ ಲಿಂಗರಾಜು ಹಾಗೂ ಶ್ರೀಮತಿ ಜೆ. ಮಂಜುಳ ಕೋಂ ಟಿ. ಜಗದೀಶ್, ಶ್ರೀಮತಿ ರೇಣುಕ ಪಿ.ಜೆ. ಕೋಂ ಮಹೇಂದ್ರಸಿಂಹ** ಮತ್ತು ಇತರರು (ವಾಸ: ಡೋರ್ ನಂ.930, 3ನೇ ಹಂತ, 8ನೇ ಮುಖ್ಯ ರಸ್ತೆ, ಗೋಕುಲ, ಮೈಸೂರು ಸಿಟಿ) ಇವರಿಂದ ಖರೀದಿಸಲು ಇಚ್ಚಿಸಿರುತ್ತಾರೆ.

ಸದರಿ ಷೆಡ್ಯೂಲ್ ಸೊತ್ತನ್ನು ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀಮತಿ ಜಿ. ಹೊನ್ನಮ್ಮ ಕೋಂ ಕೆ.ಎಂ. ಮುನಿಗೋಪಾಲರಾಜು ಮತ್ತು ಮತ್ತು ಶ್ರೀಮತಿ ಪಿ.ಜೆ. ನಾಗರತ್ನಮ್ಮ ಕೋಂ ಲೇಟ್ ಡಾ. ನರೇಶ್ ಲಿಂಗರಾಜು ಹಾಗೂ ಶ್ರೀಮತಿ ಜೆ. ಮಂಜುಳ ಕೋಂ ಟಿ. ಜಗದೀಶ್, ಶ್ರೀಮತಿ ರೇಣುಕ ಪಿ.ಜೆ. ಕೋಂ ಮಹೇಂದ್ರಸಿಂಹ** ಇವರಿಂದ ಖರೀದಿಸುವ ಬಗ್ಗೆ ಯಾರದಾರೂ ಯಾವುದೇ ರೀತಿಯ ತಂಟೆ, ತಕರಾರು, ವ್ಯಾಜ್ಯ ಅಥವಾ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ 07 ದಿವಸಗಳ ಒಳಗಾಗಿ ಈ ಕೆಳಕಂಡವರಿಗೆ ಸೂಕ್ತ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸತಕ್ಕದ್ದು, ಸದರಿ 07 ದಿವಸಗಳ ಅವಧಿ ಮೀರಿ ಬರುವ ಯಾವುದೇ ತಂಟೆ, ತಕಾರರು, ವ್ಯಾಜ್ಯ ಅಥವಾ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸದರಿ 07 ದಿವಸಗಳ ಅವಧಿ ನಂತರ ನನ್ನ ಕಕ್ಷಿಗಾರರು ಮೇಲ್ಕಂಡ **ಶ್ರೀಮತಿ ಜಿ. ಹೊನ್ನಮ್ಮ ಕೋಂ ಕೆ.ಎಂ. ಮುನಿಗೋಪಾಲರಾಜು ಮತ್ತು ಶ್ರೀಮತಿ ಪಿ.ಜೆ. ನಾಗರತ್ನಮ್ಮ ಕೋಂ ಲೇಟ್ ಡಾ. ನರೇಶ್ ಲಿಂಗರಾಜು ಹಾಗೂ ಶ್ರೀಮತಿ ಜೆ. ಮಂಜುಳ ಕೋಂ ಟಿ. ಜಗದೀಶ್, ಶ್ರೀಮತಿ ರೇಣುಕ ಪಿ.ಜೆ. ಕೋಂ ಮಹೇಂದ್ರಸಿಂಹ** ಇವರಿಂದ ಷೆಡ್ಯೂಲ್ ಸೊತ್ತನ್ನು ರಿಜಿಸ್ಟರ್ಡ್ ಕ್ರಯ ಪತ್ರ ಮಾಡಿಸಿಕೊಳ್ಳುವುದರ ಮೂಲಕ ಸೊತ್ತಿನ ಸ್ವಾಧೀನ ಹೊಂದುವರು.

ಸದರಿ ಅವಧಿ ಮೀರಿ ಬರಬಹುದಾದ ಯಾವುದೇ ತಂಟೆ, ತಕರಾರು, ವ್ಯಾಜ್ಯ ಆಕ್ಷೇಪಣೆ ವಗೈರೆಗಳು ನನ್ನ ಕಕ್ಷಿಗಾರರನ್ನು ಎಷ್ಟು ಮಾತ್ರವೂ ಪ್ರತಿಬಂಧಿಸುವುದಿಲ್ಲ ಹಾಗೂ ನನ್ನ ಕಕ್ಷಿಗಾರರು ಸದರಿ **ಶ್ರೀಮತಿ ಜಿ. ಹೊನ್ನಮ್ಮ ಕೋಂ ಕೆ.ಎಂ. ಮುನಿಗೋಪಾಲರಾಜು ಮತ್ತು ಮತ್ತು ಶ್ರೀಮತಿ ಪಿ.ಜೆ. ನಾಗರತ್ನಮ್ಮ ಕೋಂ ಲೇಟ್ ಡಾ. ನರೇಶ್ ಲಿಂಗರಾಜು ಹಾಗೂ ಶ್ರೀಮತಿ ಜೆ. ಮಂಜುಳ ಕೋಂ ಟಿ. ಜಗದೀಶ್, ಶ್ರೀಮತಿ ರೇಣುಕ ಪಿ.ಜೆ. ಕೋಂ ಮಹೇಂದ್ರಸಿಂಹ** ಇವರಿಂದ ಪಡೆದುಕೊಳ್ಳುವ ಶುದ್ಧ ಕ್ರಯಪತ್ರವನ್ನು ಎಳ್ಳಷ್ಟೂ ಬಾಧಿಸುವುದಿಲ್ಲ. ತಿಳಿಯುವುದು.

**ಷೆಡ್ಯೂಲ್**

**ದಾವಣಗೆರೆ ಸಿಟಿ. 5ನೇ ವಾರ್ಡ್, 10ನೇ ಡಿವಿಜನ್, ಎಂಸಿಸಿ 'ಬಿ' ಬ್ಲಾಕ್, 3ನೇ ಮೇನ್‌ನಲ್ಲಿ ಬರುವ ಮುನ್ಸಿಪಲ್ ಸೈಟ್ ನಂ. 205, ಇದರ ಹಳೇ ಡೋರ್ ನಂ. 1413, ನಂತರದ ಡೋರ್ ನಂ.2784, ಮಹಾನಗರ ಪಾಲಿಕೆ ಡೋರ್ ನಂ. 2784/1, ಒಟ್ಟು 44 x 60 ಅಡಿಯುಳ್ಳ ಜಾಗದಲ್ಲಿ ಕಟ್ಟಿರುವ ಆರ್‌ಸಿಸಿ ರೂಫಿಂಗ್ ಇರತಕ್ಕ ಎಲೆಕ್ಟ್ರಿಕ್, ನೀರು ಹಾಗು ಶೌಚಾಲಯದ ಪ್ರತೇಕ ಸೌಕರ್ಯಗಳು ಸಹ ಒಳಗೊಂಡ ಮಹಡಿ ಸಹಿತವಾದ ಪೂರಾ ಬಿಲ್ಡಿಂಗ್‌ನ ಪೈಕಿ ಫಸ್ಟ್ ಫ್ಲೋರ್‌ನಲ್ಲಿರುವ ಒಂದು ವಾಸದ ಮನೆ ಮತ್ತು ಇದಕ್ಕೆ ಸೇರಿ ಒಂದು ರೂಂ ಉಳ್ಳ ಸೊತ್ತು ಈ ರೀತಿ ಉಳ್ಳ ಫಸ್ಟ್ ಫ್ಲೋರ್‌ನಲ್ಲಿರುವ ಸೊತ್ತಿಗೆ ಚಕ್ಕುಬಂದಿ: ಪೂರ್ವ :** ಮೇನ್ ರೋಡ್ **ಪಶ್ಚಿಮ:** ಕನ್ಸರ್‌ವೆನ್ಸಿ **ಉತ್ತರ:** ಮಂಜುನಾಥ ಇವರ ಮನೆ **ದಕ್ಷಿಣ :** ಗುರುಲಿಂಗಪ್ಪನವರ ಮನೆ

ಈ ಮಧ್ಯದ ಒಂದು ವಾಸದ ಮನೆಯನ್ನು ನನ್ನ ಕಕ್ಷಿದಾರರು ಖರೀದಿಸುವವರಿದ್ದಾರೆ.

ದಾವಣಗೆರೆ
ದಿನಾಂಕ: 16-11-2021

**ಮಲ್ಲಿಕಾರ್ಜುನ ಕಣವಿ,** ಬಿ.ಎ, ಎಲ್ ಎಲ್ .ಎಂ.
ವಕೀಲರು, ನಂ.5 & 6, 1ನೇ ಅಂತಸ್ತು, ದಾವಣಗೆರೆ ಆಟೋಮೊಬೈಲ್ ಸೊಸೈಟಿ ಕಾಂಪ್ಲೆಕ್ಸ್, ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್ ಎದುರು, ಪಿ.ಬಿ. ರಸ್ತೆ, ದಾವಣಗೆರೆ-577006.

**ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪ್ ನಿಯಮಿತ**
ಎಚ್. ಎಂ. ರಸ್ತೆ, ದಾವಣಗೆರೆ

**ಪ್ರಕಟಣೆ**

ಮನಿಪ್ಲಾಂಟ್ ಮಲ್ಟಿಪರ್ಪಸ್ ಸೌಹಾರ್ದ ಕೋ-ಆಪ್ ನಿಯಮಿತ ದಾವಣಗೆರೆ ಇದರ 8ನೇ ವಾರ್ಷಿಕ ಸಾಮಾನ್ಯ ಸಭೆಯನ್ನು **ದಿನಾಂಕ : 18-11-2021ರ ಗುರುವಾರ ಬೆಳಿಗ್ಗೆ 11.30 ಘಂಟೆಗೆ ಸಹಕಾರಿ ಆಡಳಿತ ಕಚೇರಿ, ಎಚ್. ಎಮ್. ರಸ್ತೆ, ದಾವಣಗೆರೆಯಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಮಾನ್ಯ ಸದಸ್ಯರುಗಳು ಈ ಪ್ರಕಟಣೆಯನ್ನು ವಾರ್ಷಿಕ ಸಾಮಾನ್ಯ ಸಭೆಯ ನೋಟೀಸ್ ಎಂದು ಪರಿಭಾವಿಸಿ ಸಭೆಯಲ್ಲಿ ತಪ್ಪದೇ ಭಾಗವಹಿಸಲು ಕೋರಲಾಗಿದೆ.

**ವಿಶೇಷ ಸೂಚನೆ :** ಸಭೆಯಲ್ಲಿ ಭಾಗವಹಿಸುವ ಸದಸ್ಯರುಗಳು ಕೋವಿಡ್ ನಿಯಮಗಳನ್ನು ಪಾಲಿಸಬೇಕಾಗಿ ವಿನಂತಿಸಿದೆ.

ಸ್ಥಳ : ದಾವಣಗೆರೆ

ಆಡಳಿತ ಮಂಡಳಿಯ ಪರವಾಗಿ
**ಡಿ. ನಾಗರಾಜ್ ಮೂರ್ತಿ**
ವ್ಯವಸ್ಥಾಪಕ ನಿರ್ದೇಶಕರು

**ಆಡಳಿತ ಮಂಡಳಿ**
ಶ್ರೀ ಎಂ. ವೀರಭದ್ರಯ್ಯ, ಅಧ್ಯಕ್ಷರು, ಶ್ರೀ ಎಚ್.ಎಂ. ಈಶಪ್ರಸಾದ್, ಉಪಾಧ್ಯಕ್ಷರು, ನಿರ್ದೇಶಕರುಗಳು: ಹೆಚ್. ಎಂ. ಜಯರಾಜು, ಎಸ್ ಹೆಚ್. ರಮೇಶ್, ಆರ್. ಎಂ. ರುದ್ರಮುನಿ, ಜೆ.ಬಿ. ವಿಶ್ವನಾಥ್, ಎಂ. ಎಸ್. ಸೋಮಶೇಖರ್, ಟಿ. ಎಂ. ಗಿರೀಶ್, ಪಿ. ಎಂ. ವೀರಭದ್ರಯ್ಯ, ಶ್ರೀಮತಿ ಶಶಿಕಲಾಮೂರ್ತಿ, ಶ್ರೀಮತಿ ಜ್ಯೋತಿಪ್ರಸಾದ್.

**ಮಾನ್ಯ ಗೌರವಾನ್ವಿತ 3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ ದಾವಣಗೆರೆ**

**ಸಿ.ಆರ್.ಮಿಸ್. ನಂ 271/2021**
ಅರ್ಜಿದಾರರು: **ಪರಮೇಶ್ವರ ಜಿ.ಟಿ. ಬಿನ್ ತಿಪ್ಪೇರುದ್ರಪ್ಪ** ವಯಸ್ಸು 40 ವರ್ಷ, ವಾಸ: 117/1, ಎಂ.ಬಿ.ಕೇರಿ, ವಸಂತ ರಸ್ತೆ, ಬಾರ್ ಲೈನ್ ರೋಡ್, ದಾವಣಗೆರೆ
**ವಿರುದ್ಧ**
ಎದುರುದಾರರು: **ಜನನ ಮತ್ತು ಮರಣ ನೋಂದಣಾಧಿಕಾರಿಗಳು,** ಮಹಾನಗರ ಪಾಲಿಕೆ, ದಾವಣಗೆರೆ

**ಸಾರ್ವಜನಿಕ ನೋಟೀಸ್**

ಅರ್ಜಿದಾರರು ಸದರಿ ಅರ್ಜಿಯನ್ನು ತಮ್ಮ ತಂದೆಯಾದ **ತಿಪ್ಪೇರುದ್ರಪ್ಪ ಬಿನ್ ಜಿಗಳಿ ಬಸಪ್ಪ** ಇವರು ದಿನಾಂಕ 27.09.1981 ರಂದು ದಾವಣಗೆರೆಯ ಎಂ.ಬಿ.ಕೇರಿಯ ಅರ್ಜಿದಾರರ ಶಿರೋನಾಮೆ ವಿಳಾಸದ ಮನೆಯಲ್ಲಿ ಮೃತರಾಗಿರುತ್ತಾರೆ ಎಂಬ ಅಂಶವನ್ನು ಎದುರುದಾರರು ನೋಂದಾಯಿಸಿಕೊಂಡು ಅರ್ಜಿದಾರರ ತಂದೆಯ ಮರಣ ಪ್ರಮಾಣ ಪತ್ರವನ್ನು ನೀಡಲು ಎದುರುದಾರರಿಗೆ ಆದೇಶ ಮಾಡುವಂತೆ ಕೋರಿ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರರ ಅರ್ಜಿಯನ್ನು ಮಾನ್ಯ ನ್ಯಾಯಾಲಯವು ನೋಂದಾಯಿಸಿಕೊಂಡು ಪ್ರಕರಣವನ್ನು ದಿನಾಂಕ 20.12.2021 ರಂದು ಬೆಳಗ್ಗೆ 11 ಗಂಟೆಗೆ ವಿಚಾರಣೆಗೆ ನಿಗದಿಪಡಿಸಿದ್ದು, ಅರ್ಜಿದಾರರ ಅರ್ಜಿಗೆ ಯಾರಾದರು ತಕರಾರು ಇದ್ದಲ್ಲಿ ತಾವಾಗಲೀ ತಮ್ಮ ವಕೀಲರ ಮುಖಾಂತರವಾಗಲೀ ನಿಗದಿತ ದಿನಾಂಕ, ಸಮಯದಂದು ಮೇಲ್ಕಂಡ ನ್ಯಾಯಾಲಯದಲ್ಲಿ ತಮ್ಮ ಅಹವಾಲು ಸಲ್ಲಿಸಬಹುದು, ತಪ್ಪಿದಲ್ಲಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ 15.11.2021ರಂದು ನೀಡಲಾಗಿದೆ.
ನ್ಯಾಯಾಲಯದ ಆದೇಶದ ಮೇರೆಗೆ.

ಅರ್ಜಿದಾರರ ಪರ ವಕೀಲರು
**ಶ್ರೀ ರಜ್ವಿ ಖಾನ್, ಶ್ರೀ ಮಹಮ್ಮದ್ ಹನೀಫ್ ಶ್ರೀಮತಿ ಪುಷ್ಪಾಂಜಲಿ**, ವಕೀಲರು, ದಾವಣಗೆರೆ

ಶಿರಸ್ತೇದಾರರು
**3ನೇ ಜೆ.ಎಂ.ಎಫ್.ಸಿ. ನ್ಯಾಯಾಲಯ ದಾವಣಗೆರೆ**

**In the Court of the First Additional Senior Civil Judge At Davangere.**

**Exe. 157 / 2012**

Decree Holder : Sri. B.G. Panduranga V/s

Judgment debtor : M/s Chandrika Theaters, Represented by its Partner, Sri. K.N. Murali Krishan, M/S/ Chandrika Theaters, Registered Partnership Firm Represented by its Partner, Sri. K.N. Murali Krishna S/o K.H. Nagaraj, Pushpanjali Theater, Lingeshwara Temple Road, Davangere.

Residential Address : Sri. K.N. Murali Krishna S/o K.H. Nagaraj, 3673, 10th main Road, MCC "B" Block, Davangere.

**CAUSE NOTICE TO THE JUDGMENT DEBTOR BY SUBSTITUTED SERVICE BY MEANS OF PAPER PUBLICATION**

Whereas, the above named decree holder has filed the execution petition against the judgment debtor for recovery of Rs. 8,89,511-00 and for ther reliefs in pursuance of the decree passed in O.S. 39/2007 by the Hon'ble first additional Senior Civil Judge, Davangere. The above execution petition is remanded to this hon'ble Court by the Hon'ble High court of Karnataka by virtue of the order passed in W.P. No. 12448/2017. The Judgment debtor is avoiding the service of the cause notice sent to him. Hence, this publication.

The above case is posted for appearance of the Judgment debtor to 23rd day of November 2021. The judgment debotor is called upon to take notice to appear in the above case on 23rd day of November 2021 at 11.00 am either personally or through and advocate, failing which all further proceedings will take place in your absence. Given under my hand and seal on 11th day of october 2021 at Davangere.

By Order of the court

**Davangere**
**Date : 11.10.2021**

Sd/- Chief Ministerial Officer, Principal Senior Civil Judge Court, Davangere.

# ಆಹಾರ ಒದಗಿಸುವುದು ಮೊದಲ ಕರ್ತವ್ಯ

## ದೇಶಾದ್ಯಂತ ಸಮುದಾಯ ಅಡುಗೆ ಮನೆ ಸ್ಥಾಪನೆಯ ವಿವರ ಕೇಳಿದ ಸುಪ್ರೀಂ



ನವದೆಹಲಿ, ನ. 16 – ಹಸಿವಿನಿಂದ ಸಾಯುತ್ತಿರುವ ಜನರಿಗೆ ಆಹಾರ ಒದಗಿಸುವುದು ಕಲ್ಯಾಣ ರಾಜ್ಯದ ಮೊದಲ ಕರ್ತವ್ಯ ಎಂದಿರುವ ಸುಪ್ರೀಂ ಕೋರ್ಟ್, ಸಮುದಾಯ ಅಡುಗೆ ಮನೆ ಯೋಜನೆಯನ್ನು ದೇಶಾದ್ಯಂತ ಜಾರಿಗೆ ತರಲು ಯೋಜನೆ ರೂಪಿಸುವುದಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ನೀಡಿರುವ ಉತ್ತರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ ಮತ್ತು ಹಿಮಾ ಕೊಹ್ಲಿ ಅವರನ್ನು ಒಳಗೊಂಡ ಪೀಠ ಮೂರು ವಾರಗಳಲ್ಲಿ ರಾಜ್ಯಗಳ ಜೊತೆ ಸಭೆ ನಡೆಸುವಂತೆ ಕೇಂದ್ರ ಸರ್ಕಾರಕ್ಕೆ ತಿಳಿಸಿದೆ.

ಅಧೀನ ಕಾರ್ಯದರ್ಶಿ ಹಂತದ ಅಧಿಕಾರಿ ಈ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಿರುವ ಹಾಗೂ ಯೋಜನೆ ಜಾರಿಗೆ ಸಂಬಂಧಿಸಿದಂತೆ ಅಗತ್ಯ ವಿವರ ನೀಡದ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿರುವ ನ್ಯಾಯಾಲಯ, ಈ ಬಗ್ಗೆ ಸರ್ಕಾರಕ್ಕೆ ಅಂತಿಮ ಎಚ್ಚರಿಕೆ ನೀಡಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಮುದಾಯ ಅಡುಗೆ ಮನೆಗಳ ಮೂಲಕ ಹಸಿದಿರುವ ಹಾಗೂ ಅಪೌಷ್ಠಿಕತೆ ನಿವಾರಿಸುವ ಕುರಿತು ಕ್ರಮ ತೆಗೆದುಕೊಳ್ಳಬೇಕೆಂದು ಸುಪ್ರೀಂ ಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಲಾಗಿದೆ.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಾಲಯ, ಹಸಿವಿನಿಂದ ಸಾಯುತ್ತಿರುವ ಜನರಿಗೆ ಆಹಾರ ಒದಗಿಸುವುದು ಕಲ್ಯಾಣ ಸರ್ಕಾರದ ಮೊದಲ ಕರ್ತವ್ಯ. ಈ ಯೋಜನೆ ರೂಪಿಸುವ ಬಗ್ಗೆ ಕೇಂದ್ರದ ಪ್ರಮಾಣ ಪತ್ರದಲ್ಲಿ ಯಾವುದೇ ಉಲ್ಲೇಖವಿಲ್ಲ. ಕೇಂದ್ರ ಸರ್ಕಾರದಿಂದ ಏಕರೂಪದ ಮಾದರಿ ಬೇಕಿದೆ ಎಂದು ತಿಳಿಸಿದೆ.

# ನಗರದಲ್ಲಿ ಇಂದು 'ಜೈ ಭೀಮ್' ಚಿತ್ರ ಪ್ರದರ್ಶನ

ಕರುಣಾ ಜೀವ ಕಲ್ಯಾಣ ಕಚೇರಿಯಲ್ಲಿ 'ಜೈ ಭೀಮ್' ಚಿತ್ರ ಪ್ರದರ್ಶನ ಇಂದು ಸಂಜೆ 5.45 ಕ್ಕೆ ನಡೆಯಲಿದೆ.

ಸರ್ಕಾರದ ಕನಿಷ್ಟ ಸೌಲಭ್ಯಗಳೂ ಇಲ್ಲದ ಬುಡಕಟ್ಟು ಜನಾಂಗವೊಂದರ ಮೇಲೆ ಅನಾವಶ್ಯಕವಾಗಿ ಹೇರಲಾಗುವ ಅಪರಾಧಗಳ ಸರಮಾಲೆ; ಅದನ್ನು ಸಮರ್ಥಿಸಿಕೊಳ್ಳುವ ಪೊಲೀಸ್ ಇಲಾಖೆಯ ದೌರ್ಜನ್ಯಕ್ಕೊಳಗಾಗುವ ಅಸಹಾಯಕ ಕುಟುಂಬದ ಸಹಾಯಕ್ಕೆ ನಿಲ್ಲುವ ನ್ಯಾಯವಾದಿಯೊಬ್ಬರ ನಿಷ್ಕಲ್ಮಶ ಕಾಳಜಿಯೊಂದಿಗೆ ವ್ಯವಸ್ಥೆ ವಿರುದ್ಧ ಸಮರ ಸಾರಿ, ಗೆಲ್ಲಬಹುದೆನ್ನುವ ಸಂದೇಶವಿರುವ 'ಜೈ ಭೀಮ್' ಚಲನ ಚಿತ್ರದ ಪ್ರದರ್ಶನ ಏರ್ಪಡಿಸಲಾಗಿದೆ.

# ಜಂಡೆ ಕಟ್ಟೆ ತೆರವಿಗೆ ಖಂಡನೆ, ಮರು ನಿರ್ಮಾಣಕ್ಕೆ ಪಟ್ಟು

ದಾವಣಗೆರೆ, ನ.16- ನಗರದ ಎಂ.ಬಿ. ಕೇರಿಯಲ್ಲಿ ಜಂಡೆ ಕಟ್ಟೆಯನ್ನು ನಗರ ಪಾಲಿಕೆಯಿಂದ ತೆರವುಗೊಳಿಸಿದ್ದನ್ನು ಖಂಡಿಸಿ, ಜಾತ್ಯತೀತ ಜನತಾದಳದ ಅಲ್ಪಸಂಖ್ಯಾತರ ಘಟಕದ ನೇತೃತ್ವದಲ್ಲಿ ಎಂ.ಬಿ. ಕೇರಿಯ ಸ್ಥಳೀಯರು ನಗರ ಪಾಲಿಕೆ ಮುಂಭಾಗದಲ್ಲಿ ಇಂದು ಪ್ರತಿಭಟನೆ ನಡೆಸಿ, ಮರು ನಿರ್ಮಾಣಕ್ಕೆ ಆಗ್ರಹಿಸಿದರು.

ಕಾನೂನು ನೆಪವೊಡ್ಡಿ ದಶಕಗಳ ಹಳೆಯದಾದ ಸೂಫಿಗಳ ವಿಚಾರ ಧಾರೆಯ ಸೌಹಾರ್ದ ಕೇಂದ್ರವಾಗಿದ್ದ ಜಂಡೆ ಕಟ್ಟೆಯನ್ನು ಧ್ವಂಸ ಮಾಡಲಾಗಿದೆ. ಪಾಲಿಕೆಯ ಈ ರೀತಿಯ ನಡವಳಿಕೆಯಿಂದ ಸೌಹಾರ್ದದ ನಂಬಿಕೆಗೆ ಧಕ್ಕೆ ಉಂಟಾಗಿದೆ ಎಂದು ಪಕ್ಷದ ಮುಖಂಡ ಜೆ. ಅಮಾನುಲ್ಲಾ ಖಾನ್ ಆಕ್ಷೇಪಿಸಿದರು.

ಹಿಂದೂ - ಮುಸ್ಲಿಮರು ಬಾಂಧವ್ಯದಿಂದ ಜೀವನ ಸಾಗಿಸುತ್ತಿದ್ದಾರೆ. ಇಂತಹ ಸಮಯದಲ್ಲಿ ಅಧಿಕಾರಿಗಳು ತಮ್ಮ ಇಚ್ಛೆಯಂತೆ ಇಂತಹ ಕೆಲಸ ಮಾಡುತ್ತಿರುವುದು ಅಶಾಂತಿಗೆ ಕಾರಣ. ಹೀಗಾಗಿ, ಈಗ ತೆರವು ಮಾಡಲಾದ ಜಂಡೆ ಕಟ್ಟೆ ಮರು ನಿರ್ಮಾಣ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಘಟಕದ ಜಿಲ್ಲಾಧ್ಯಕ್ಷ ಯು.ಎಂ. ಮನ್ಸೂರ್ ಅಲಿ, ಮುಖಂಡರಾದ ಟಿ. ಅಸ್ಗರ್, ಜಮೀರ್ ಅಹಮ್ಮದ್ ಖಾನ್, ಕೆ. ದಾದಾಪೀರ್, ಷನವಾಜ್ ಖಾನ್, ಜಬೀವುಲ್ಲಾ ಸೇರಿದಂತೆ ಇತರರು ಭಾಗವಹಿಸಿದ್ದರು.

**ಅನಧಿಕೃತ ಕಟ್ಟಡ :** ರಸ್ತೆಯಲ್ಲಿ ಅನಧಿಕೃತ ಕಟ್ಟಡ ಕಟ್ಟಿದ್ದರೆ ಅದನ್ನು ತೆರವುಗೊಳಿಸಲು ತಮಗೆ ಅಧಿಕಾರ ಇದೆ ಎಂದು ಪಾಲಿಕೆ ಆಯುಕ್ತ ವಿಶ್ವನಾಥ ಪಿ. ಮುದಜ್ಜಿ ಅವರು ತಿಳಿಸಿದರು.



ಪ್ರತಿಭಟನೆ ಸಂದರ್ಭದಲ್ಲಿ ಪಾಲಿಕೆಯ ಆಯುಕ್ತರ ಕಚೇರಿಗೆ ಆಗಮಿಸಿದ ಮುಖಂಡರೊಬ್ಬರು ಜಂಡೆ ಕಟ್ಟೆಯ ತೆರವುಗೊಳಿಸಲು ನಿಮಗೆ ಅಧಿಕಾರ ಇದೆಯೇ, ಕೌನ್ಸಿಲ್ ಸಭೆಯ ಗಮನಕ್ಕೆ ತರದೇ ಈ ರೀತಿ ಮಾಡಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದ ಹಿನ್ನೆಲೆಯಲ್ಲಿ ಆಯುಕ್ತರು ಈ ಸ್ಪಷ್ಟನೆ ನೀಡಿದರು.

ಸಾರ್ವಜನಿಕ ರಸ್ತೆಯಲ್ಲಿ ಅನಧಿಕೃತ ಕಟ್ಟಡ ಕಟ್ಟಿದ್ದರೆ ಅದಕ್ಕೆ ಆಕ್ಷೇಪ ವ್ಯಕ್ತವಾದಲ್ಲಿ ತೆರವುಗೊಳಿಸಲು ತಮಗೆ ಅಧಿಕಾರ ಇದೆ. ಇದು ಕೌನ್ಸಿಲ್ ಸಭೆಗೆ ತರುವ ಅವಕಶ್ಯಕತೆ ಇಲ್ಲ ಎಂದು ಆಯುಕ್ತರು ಹೇಳಿದರು.

ಎಂ.ಬಿ. ಕೇರಿಯಲ್ಲಿ ಜಂಡೆ ಕಟ್ಟೆ ವಿಸ್ತಾರ ಮಾಡಲಾಗುತ್ತಿದೆ ಎಂದು ಪೊಲೀಸರಿಗೆ ಮೂಖರ್ಜಿ ಹಾಕಲಾಗಿತ್ತು. ಪೊಲೀಸರು ವರದಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸ್ಥಳ ಪರಿಶೀಲನೆ ಮಾಡಲಾಗಿತ್ತು. ಮೊದಲಿನ ಮೂಲ ಸ್ವರೂಪ ಬಿಟ್ಟು ಏನು ಕಟ್ಟಬೇಡಿ ಎಂದು 2 - 3 ಬಾರಿ ಹೇಳಿದ್ದೆವು. ಅದನ್ನು ಮೀರಿ ರಾತೋರಾತ್ರಿ ಅಲ್ಲಿ ಹೆಚ್ಚಿಗೆ ಕಟ್ಟಡ ಕಟ್ಟಲು ಮುಂದಾಗಿದ್ದರು. ಹೀಗಾಗಿ, ತಾವು ತೆರವುಗೊಳಿಸಿದೆವು. ಮೂಲ ಸ್ವರೂಪದಲ್ಲಿ ಬಿಟ್ಟಿದ್ದರೆ ನಾವೇನೂ ಮಾಡುತ್ತಿರಲಿಲ್ಲ ಎಂದು ಸ್ಪಷ್ಟಪಡಿಸಿದರು.

**ಸೌಹಾರ್ದ ಪರಿಹಾರಕ್ಕೆ ಮುಖಂಡರ ಮನವೊಲಿಕೆ:** ಆಯುಕ್ತರೊಂದಿಗೆ ಮಾತುಕತೆ ನಡೆಸಿದ ಸಂದರ್ಭದಲ್ಲಿ ಜೆ. ಅಮಾನುಲ್ಲಾ ಖಾನ್, ಜಮೀರ್ ಅಹಮ್ಮದ್ ಖಾನ್ ಜಂಡೆ ಕಟ್ಟೆ ತೆರವಿಗೆ ಆಕ್ಷೇಪಿಸಿದರು. ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್, ಅಲ್ಲಿ ಹಿಂದೆ ಮತ್ತು ವಾಸ್ತವದ ಪರಿಸ್ಥಿತಿಗಳ ಬಗ್ಗೆ ತಾವೂ ಅವಲೋಕಿಸಿ, ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿರುವುದಾಗಿ ತಿಳಿಸಿದರು.

**ಸೌಹಾರ್ದ ಪರಿಹಾರಕ್ಕೆ ಮುಖಂಡರ ಮನವಿ**

ಈ ವೇಳೆ ಮಾತನಾಡಿದ ಪಾಲಿಕೆ ಸದಸ್ಯ ಚಮನ್ ಸಾಬ್, ನಗರದಲ್ಲಿ ಸಾಮರಸ್ಯ ಕಾಪಾಡುವುದು ಮುಖ್ಯ. ಹಾಗಾಗಿ ಜಂಡೆ ಕಟ್ಟೆ ವಿಚಾರವಾಗಿ ಈಗಾಗಲೇ ಆಯುಕ್ತರೊಂದಿಗೆ ಮಾತನಾಡಿದ್ದೇವೆ. ಮುಂದೆ ಮೇಯರ್ ಅವರೊಂದಿಗೆ ಮಾತನಾಡಿ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಇದ್ದೇವೆ. ಸೌಹಾರ್ದತೆಯಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳೋಣ ಎಂದು ತಿಳಿಸಿದರು.

ಅಂತಿಮವಾಗಿ ಪಾಲಿಕೆ ಆಯುಕ್ತರ ಸಹಿತ ಪ್ರತಿಭಟನಾಕಾರರ ಬಳಿ ಬಂದು ಜಂಡೆ ಕಟ್ಟೆಯ ಸಮಸ್ಯೆಗೆ ಸೌಹಾರ್ದವಾಗಿಯೇ ಪರಿಹಾರ ಕಂಡುಕೊಳ್ಳಬೇಕು ಎಂದು ಜೆ. ಅಮಾನುಲ್ಲಾ ಖಾನ್, ಪಾಲಿಕೆ ಸದಸ್ಯ ಚಮನ್ ಸಾಬ್, ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಾಲಿಕೆ ವಿರೋಧ ಪಕ್ಷದ ನಾಯಕ ಎ. ನಾಗರಾಜ್ ಪ್ರತಿಭಟನಾಕಾರರ ಮನವೊಲಿಸಿದರು.

# ಜಗಳೂರಿನಲ್ಲಿ ಸಿವಿಲ್ ನ್ಯಾಯಾಲಯ ಕಾಯಂ : ಬೇಡಿಕೆ ಈಡೇರಿಕೆಗೆ ಶೀಘ್ರ ಕ್ರಮ

ಜಗಳೂರು, ನ.16- ಜಗಳೂರಿನಲ್ಲಿ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯವನ್ನು ಕಾಯಂಗೊಳಿಸುವ ಬೇಡಿಕೆಯ ಬಗ್ಗೆ ಶೀಘ್ರವೇ ನಿರ್ಧಾರ ಕೈಗೊಳ್ಳಲಾಗುವುದು ಎಂದು ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ನಟರಾಜನ್ ತಿಳಿಸಿದ್ದಾರೆ.

ಪಟ್ಟಣದ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಭಾನುವಾರ ಭೇಟಿ ನೀಡಿದ್ದ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿಗಳೂ ಆಗಿರುವ ನಟರಾಜನ್ ಅವರು, ತಾಲ್ಲೂಕು ವಕೀಲರ ಸಂಘದಿಂದ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದರು.



ಪ್ರಸ್ತುತ ವಾರಕ್ಕೆ ಎರಡು ದಿನ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ ಕಾರ್ಯನಿರ್ವಹಿಸುತ್ತಿದ್ದು, ಕಾಯಂಗೊಳಿಸುವಂತೆ ವಕೀಲರ ಸಂಘ ಬೇಡಿಕೆ ಇಟ್ಟಿದೆ. ಬೆಂಗಳೂರಿಗೆ ತೆರಳಿದ ನಂತರ ನಾಳೆಯೇ ಈ ಬಗ್ಗೆ ಸಭೆ ಕರೆದು ಕಾಯಂ ನ್ಯಾಯಾಲಯ ಸ್ಥಾಪನೆ ಬಗ್ಗೆ ಅಗತ್ಯ ಪರಿಶೀಲನೆ ನಡೆಸಿ ನಿರ್ಧಾರ ಕೈಗೊಳ್ಳಲಾಗುವುದು. ಹಾಗೆಯೇ ಸಹಾಯಕ ಸರ್ಕಾರಿ ವಕೀಲರೂ ಸಹ ಕಾಯಂ ಆಗಿ ಇಲ್ಲಿ ಸೇವೆ ಸಲ್ಲಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು.

**ಹೈಕೋರ್ಟ್ ನ್ಯಾ|| ನಟರಾಜನ್**

ಕೊರೊನಾ ಅವಧಿಯಲ್ಲೂ ದೇಶದಲ್ಲೇ ರಾಜ್ಯದ ನ್ಯಾಯಾಲಯಗಳು ಮಾತ್ರ ಕಾರ್ಯ ನಿರ್ವಹಿಸಿವೆ. ಬಡವರಿಗೆ ನ್ಯಾಯ ಪಡೆಯಲು ತೊಂದರೆಯಾಗದಂತೆ ಕಲಾಪಗಳನ್ನು ನಾವು ನಡೆಸುತ್ತಿದ್ದೇವೆ ಎಂದು ನ್ಯಾ. ನಟರಾಜನ್ ಹೇಳಿದರು.

ಪಟ್ಟಣದ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ಕಾರ್ಯ ವೈಖರಿ ಹಾಗೂ ಸಮಾರಂಭದ ಬಗ್ಗೆ ಈ ಸಂದರ್ಭದಲ್ಲಿ ಅವರು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರಾದ ಪ್ರಭು ಬಡಿಗೇರ್, ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶ ಜಿ. ತಿಮ್ಮಯ್ಯ, ಎಪಿಪಿ ರೂಪ ಮತ್ತು ವಕೀಲರ ಸಂಘದ ಸದಸ್ಯರು ಇದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೇವರಾಜ ಅರಸು ಬಡಾವಣೆ, ಎಸ್‌ಪಿ ಆಫೀಸ್, ಆರ್‌ಟಿಓ ಆಫೀಸ್, ವಿಜಯನಗರ ಬಡಾವಣೆ, ರಾಜೀವ್ ಗಾಂಧಿ ಬಡಾವಣೆ, ಎಸ್‌ಪಿಎಸ್ ನಗರ 2ನೇ ಹಂತ, ಎಸ್‌ಎಮ್‌ಕೆ ನಗರ, ವಾಲ್ಮೀಕಿ ಸರ್ಕಲ್ ಸುತ್ತಮುತ್ತ, ಕೊಂಡಜ್ಜಿ ರಸ್ತೆ, ಎಸ್‌ಜೆಎಂ ನಗರ, ಸೇವಾದಳ ಕಾಲೋನಿ, ಹೊಸಕ್ಯಾಂಪ್, ಎಸ್‌ಎಮ್‌ಕೆ ನಗರ, ಬಿ.ಜೆ.ಎಮ್ ಸ್ಕೂಲ್, ಬೂದಿಹಾಳ್ ರಸ್ತೆ, ಬಾಬು ಜಗಜೀವನ್‌ರಾಮ್ ನಗರ, ಗೌರಸಂದ್ರ ಮಾರಮ್ಮ ದೇವಸ್ಥಾನದ ಸುತ್ತಮುತ್ತ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.


**REQUIRED**

**LIAISON EXECUTIVE** (SSLC QUALIFIED); **ELECTRICIAN** (DIPLOMA HOLDER) AND **HORTICULTURIST** (PREFERABLY GRADUATE) TO WORK AT RANEBENNUR AREA.

CONTACT: 8431286626
6364862762 / 08049222216

**ಬೇಕಾಗಿದೆ**

ದಾವಣಗೆರೆಯಿಂದ ರಾಣೆಬೆನ್ನೂರಿನವರೆಗೆ 10 ಕಿ.ಮೀ. ವ್ಯಾಪ್ತಿಯಲ್ಲಿ 10 ರಿಂದ 100 ಎಕರೆವರೆಗೆ ಕೆಂಪು ಮಣ್ಣು & ನೀರಿನ ಸೌಕರ್ಯವಿರುವ ಕೃಷಿ ಭೂಮಿ ಹಾಗೂ ಕೈಗಾರಿಕೆ ಉದ್ದೇಶಕ್ಕಾಗಿ ಭೂಮಿ ಬೇಕಾಗಿದೆ.

Mr. Vijaya Kumar 8431286626
Mr. Nagaraju C A 6364862762
Mr. Lingaraj 8453521357


# ಗೂಡ್ಸೆ ಪ್ರತಿಮೆ ಸ್ಥಾಪನೆ, ಧ್ವಂಸ : 7 ಜನರ ಬಂಧನ

ಜಾಮ್ನಗರ, ನ. 16 – ಗುಜರಾತ್‌ನ ಜಾಮ್‌ನಗರದಲ್ಲಿ ಬಲಪಂಥೀಯ ಸಂಘಟನೆಯೊಂದು ಮಹಾತ್ಮ ಗಾಂಧೀಜಿ ಹಂತಕ ನಾಥೂರಾಮ್ ಗೂಡ್ಸೆ ಪ್ರತಿಮೆ ಸ್ಥಾಪಿಸಿದ ಮರು ದಿನವೇ ನಗರ ಕಾಂಗ್ರೆಸ್ ಮುಖಂಡರು ಪ್ರತಿಮೆಯನ್ನು ಧ್ವಂಸಗೊಳಿಸಿದ ಘಟನೆ ನಡೆದಿದೆ.

ಈ ಬಗ್ಗೆ ಎರಡೂ ಸಂಘಟನೆಗಳು ಪರಸ್ಪರರ ವಿರುದ್ಧ ದೂರು ದಾಖಲಿಸಿದ್ದು, ಒಟ್ಟು ಏಳು ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಸೋಮವಾರ ನಗರದ ಹೊರ ವಲಯದಲ್ಲಿರುವ ಆಶ್ರಮ -ದೇವಾಲಯದ ಹೊರಗಿನ ಮೈದಾನದಲ್ಲಿ ವಕೀಲ ಪ್ರತೀಕ್ ಭಟ್ ನೇತೃತ್ವದ ಹಿಂದೂ ಸೇನಾ ಸಂಘಟನೆಯ ಸದಸ್ಯರು ಗೂಡ್ಸೆ ಪ್ರತಿಮೆ ಸ್ಥಾಪಿಸಿದ್ದರು.

ಪ್ರತಿಮೆ ಸ್ಥಾಪನೆ ಬಗ್ಗೆ ತಿಳಿದ ನಂತರ ಕಾಂಗ್ರೆಸ್ ಮುಖಂಡರಾದ ದಿಗುಭಾ ಜಡೇಜಾ ಮತ್ತಿತರರು ಸ್ಥಳಕ್ಕೆ ತೆರಳಿ ಪ್ರತಿಮೆ ಧ್ವಂಸಗೊಳಿಸಿದ್ದಾರೆ. ಈ ಬಗ್ಗೆ ಭಟ್ ಹಾಗೂ ಜಡೇಜಾ ಪರಸ್ಪರರ ವಿರುದ್ಧ ದೂರು ದಾಖಲಿಸಿದ್ದಾರೆ.

# ಇಂದು 32000 ಲಸಿಕೆ ಹಂಚಿಕೆ

ಕೋವಿಡ್ ಸೋಂಕು ತಡೆಗಟ್ಟುವ ನಿಟ್ಟಿನಲ್ಲಿ ನಗರ ಮತ್ತು ತಾಲ್ಲೂಕಿನಲ್ಲಿ ಇಂದು ಬೃಹತ್ ಲಸಿಕಾ ಮೇಳ ಹಮ್ಮಿಕೊಳ್ಳಲಾಗಿದ್ದು, ದಾವಣಗೆರೆ ತಾಲ್ಲೂಕಿಗೆ ಇಂದು ಒಟ್ಟು 32000 ಕೋವಿಶೀಲ್ಡ್ ಮತ್ತು ಕೋವ್ಯಾಕ್ಸಿನ್ ಲಸಿಕೆಯನ್ನು ಹಂಚಿಕೆ ಮಾಡಲಾಗಿದೆ ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಎಲ್.ಡಿ. ವೆಂಕಟೇಶ್ ತಿಳಿಸಿದ್ದಾರೆ.

ನಗರದ ಎಲ್ಲಾ 9 ನಗರ ಆರೋಗ್ಯ ಉಪಕೇಂದ್ರಗಳ ವ್ಯಾಪ್ತಿಯಲ್ಲಿ 18000 ಡೋಸ್ ಕೋವಿಶೀಲ್ಡ್ ಮತ್ತು 2000 ಡೋಸ್ ಕೋವ್ಯಾಕ್ಸಿನ್ ಲಸಿಕೆ ನೀಡಲಾಗುವುದು. ತಾಲ್ಲೂಕು ವ್ಯಾಪ್ತಿಯ ಎಲ್ಲ 25 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 11500 ಡೋಸ್ ಕೋವಿಶೀಲ್ಡ್, ದಾವಣಗೆರೆ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ 500 ಡೋಸ್ ಕೋವಿಶೀಲ್ಡ್ ಸೇರಿದಂತೆ ಒಟ್ಟು 30 ಸಾವಿರ ಡೋಸ್ ಕೋವಿಶೀಲ್ಡ್ ಮತ್ತು 2 ಸಾವಿರ ಡೋಸ್ ಕೋವ್ಯಾಕ್ಸಿನ್ ಲಸಿಕೆ ನೀಡುವ ಗುರಿ ಹಾಕಿಕೊಳ್ಳಲಾಗಿದೆ. 18 ವರ್ಷ ಮೇಲ್ಪಟ್ಟ ಎಲ್ಲರೂ ಕೂಡ ಕೋವಿಡ್ ನಿರೋಧಕ ಲಸಿಕೆಯನ್ನು ಪಡೆದುಕೊಳ್ಳಬೇಕು. ಇದುವರೆಗೂ ಮೊದಲನೇ ಡೋಸ್ ಪಡೆಯದವರು ಹಾಗೂ ಈಗಾಗಲೇ ಮೊದಲನೇ ಡೋಸ್ ಪಡೆದು, ನಿಗದಿತ ಅವಧಿ ಪೂರ್ಣಗೊಂಡವರು 2ನೇ ಡೋಸ್ ಲಸಿಕೆ ಪಡೆಯಬೇಕು ಎಂದು ವೆಂಕಟೇಶ್ ತಿಳಿಸಿದ್ದಾರೆ.

# ನಗರಕ್ಕೆ ನಾಳೆ ಜಿಲ್ಲಾ ಉಸ್ತುವಾರಿ ಸಚಿವ

ದಾವಣಗೆರೆ, ನ. 16- ರಾಜ್ಯ ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ಅವರು ನಾಡಿದ್ದು ದಿನಾಂಕ 18ರ ಗುರುವಾರ ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 9.30 ಕ್ಕೆ ನಗರಕ್ಕಾಗಮಿಸುವ ಸಚಿವರು, ಜಿಎಂಐಟಿ ಅತಿಥಿ ಗೃಹಕ್ಕೆ ತೆರಳುವರು. ನಂತರ 11 ಕ್ಕೆ ಪಕ್ಷದ ವತಿಯಿಂದ ಆಯೋಜಿಸಲಾಗಿರುವ ಜನ ಸ್ವರಾಜ್ ಯಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ಕಡಲಬಾಳ್‌ನಲ್ಲಿಂದು ಧಾತ್ರೀ ಹವನ

ಶ್ರೀ ಹನುಮ ಭೀಮ ಮಧ್ವ ಸೇವಾ ಚಾರಿಟಬಲ್ ಟ್ರಸ್ಟ್ ವತಿಯಿಂದ ದಾವಣಗೆರೆ ತಾಲ್ಲೂಕಿನ ಶ್ರೀ ಕ್ಷೇತ್ರ ಕಡಲಬಾಳ ಗ್ರಾಮದಲ್ಲಿ ಇಂದು ಧಾತ್ರೀ ಹವನ ಮಹೋತ್ಸವ ನಡೆಯಲಿದೆ.

ಬೆಳಿಗ್ಗೆ 7 ಕ್ಕೆ ನಿರ್ಮಾಲ್ಯ ವಿಸರ್ಜನೆ ಹಾಗೂ ಪಂಚಾಮೃತ ಅಭಿಷೇಕ ನಡೆಯಲಿದೆ. ಬೆಳಿಗ್ಗೆ 8 ಕ್ಕೆ ವಾಯುಸ್ತುತಿ ಪುನಶ್ಚರಣವು ವಿಶ್ವಮಾಧ್ವ ಪರಿಷತ್ ಇವರಿಂದ ನಡೆಯುವುದು. ಬೆಳಿಗ್ಗೆ 9.30 ಕ್ಕೆ ಧಾತ್ರೀ ಹವನ ಪೂರ್ಣಾಹುತಿ ವೇ|| ಕಡೂರ ಪ್ರಾಣೇಶಾಚಾರ್ ಇವರಿಂದ ನೆರವೇರುವುದು.

ಬೆಳಿಗ್ಗೆ 11.30ಕ್ಕೆ ದಾವಣಗೆರೆಯ ಭಾರತಿ ಭಜನಾ ಮಂಡಳಿ, ನಂದ ಕಿಶೋರ ಭಜನಾ ಮಂಡಳಿ, ಹರಿಹರದ ವೈಷ್ಣವಿ ಭಜನಾ ಮಂಡಳಿಯಿಂದ ಭಜನೆ ಏರ್ಪಾಡಾಗಿದೆ. ಮಧ್ಯಾಹ್ನ 12.30 ಕ್ಕೆ ಕಾರ್ತೀಕ ಮಾಸದ ವನಭೋಜನದ ಬಗ್ಗೆ ವೇ|| ಪಾಂಡುರಂಗಾಚಾರ್ ಮಣ್ಣೂರ್ ಅವರಿಂದ ಪ್ರವಚನ ನಡೆಯಲಿದೆ ಎಂದು ದೇವಸ್ಥಾನದ ಕಾರ್ಯದರ್ಶಿ ಎಂ.ವಿ. ರಾಮರಾವ್, ಸುತೀರ್ಥ ಕಟ್ಟಿ, ಖಜಾಂಚಿ ಕೆ. ಗುರುರಾಜ ತಿಳಿಸಿದ್ದಾರೆ.

# ಪೂರ್ಣ ಲಸಿಕೆ ಪಡೆದವರ ಮನೆಗೆ ಸ್ಟಿಕ್ಕರ್ : ಮಾಂಡವೀಯ ಸಲಹೆ

ನವದೆಹಲಿ ನ. 16 – ಲಸಿಕೆ ಪಡೆಯುವುದಕ್ಕೆ ಉತ್ತೇಜನ ನೀಡುವ ಸಲುವಾಗಿ ಪೂರ್ಣ ಲಸಿಕೆ ಪಡೆದವರ ಮನೆಗಳಿಗೆ ಸ್ಟಿಕ್ಕರ್ ಅಂಟಿಸುವ ಬಗ್ಗೆ ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಸಲಹೆ ನೀಡಿದ್ದಾರೆ.

ಮಂಗಳವಾರ ಸರ್ಕಾರೇತರ ಸಂಘಟನೆಗಳು, ನಾಗರಿಕ ಸಂಘಟನೆಗಳು ಹಾಗೂ ಅಭಿವೃದ್ಧಿ ಸಹಭಾಗಿಗಳ ಜೊತೆ ಮನೆ ಮನೆಗೆ ತೆರಳಿ ಲಸಿಕೆ ನೀಡುವ ಕುರಿತು ಚರ್ಚಿಸುವಾಗ ಸಚಿವರು ಈ ಸಲಹೆ ನೀಡಿದ್ದಾರೆ. ಮನೆ ಮನೆಗೆ ತೆರಳಿ ಲಸಿಕೆ ನೀಡುವ ಬೃಹತ್ ಕಾರ್ಯಕ್ಕೆ ಜನರ ಸಹಭಾಗಿತ್ವ ಮುಖ್ಯವಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ದೇಶದ ಶೇ.80ರಷ್ಟು ಜನರು ಮೊದಲ ಡೋಸ್ ಲಸಿಕೆ ಹಾಗೂ ಶೇ.40ರಷ್ಟು ಜನರು ಎರಡನೇ ಡೋಸ್ ಲಸಿಕೆ ಪಡೆದಿದ್ದಾರೆ ಎಂದು ಸಚಿವ ಮಾಂಡವೀಯ ಇದೇ ಸಂದರ್ಭದಲ್ಲಿ ಹೇಳಿದ್ದಾರೆ.


**ಅಭಿನಂದನೆಗಳು**

ದಾವಣಗೆರೆ ನಾಮದೇವ ಶಿಂಪಿ ಸಮಾಜದ ಅಧ್ಯಕ್ಷರಾಗಿ ನೇಮಕವಾಗಿರುವ ಮಹೇಂದ್ರಕರ್ ಟೆಕ್ಸ್‌ಟೈಲ್ಸ್ ಮಾಲೀಕರಾದ **ಎಂ.ಎಸ್. ವಿಠಲ್** ಅವರಿಗೆ ಹೃದಯ ಪೂರ್ವಕ ಅಭಿನಂದನೆಗಳು.

ಜೆ.ಪಿ. ಪರಶುರಾಮ್ ಮಹೇಂದ್ರಕರ್ ಮತ್ತು ಸಹೋದರರು ಹರಿಹರ.
ಜೆ.ಪಿ. ವಿನಾಯಕ ಮಹೇಂದ್ರಕರ್ ಹರಿಹರ.
ಜೆ.ಎಂ. ಅಶ್ವಿನಿ ಜ್ಞಾನೇಶ್ವರ ಮಾಳೋದೆ.





**ಕೈಲಾಸ ಶಿವಗಣಾರಾಧನೆಯ ಆಹ್ವಾನ ಪತ್ರಿಕೆ**

|| ಶ್ರೀ ನಿರ್ವಾಣ ಸಿದ್ದೇಶ್ವರ ಪ್ರಸನ್ನ ||

ಶ್ರೀ ಬಿಳೇಬಾಳದ ಮಂಜುನಾಥ ಮತ್ತು ಸಹೋದರರು ಹಂಸಾಗರ್ ಕಾಂಪೌಂಡ್, ಹರಿಹರ ಇವರು ಮಾಡುವ ವಿಜ್ಞಾಪನೆಗಳು. ದಿನಾಂಕ 13.11.2021ನೇ ಶನಿವಾರ ಬೆಳಗಿನ ಜಾವ 6.30ಕ್ಕೆ ನನ್ನ ಧರ್ಮಪತ್ನಿಯವರಾದ **ಶ್ರೀಮತಿ ಸೌಭಾಗ್ಯ** ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **ಕೈಲಾಸ ಶಿವಗಣಾರಾಧನೆಯನ್ನು** ದಿನಾಂಕ 17.11.2021ನೇ ಬುಧುವಾರ ಮಧ್ಯಾಹ್ನ 11.30ಕ್ಕೆ, ಹರಿಹರದ ಹಂಸಾಗರ ಕಾಂಪೌಂಡ್, 1ನೇ ಮೇನ್, 1ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು. ತಾವುಗಳು ಆಗಮಿಸಿ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.





ಜನನ: 16-05-1966
ನಿಧನ: 13-11-2021

ಇಂತಿ ದುಃಖತಪ್ತರು: ಶ್ರೀ ಬಿಳೇಬಾಳದ ಮಂಜುನಾಥ ಮತ್ತು ಸಹೋದರರು, ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಬಿಳೇಬಾಳದ ವಂಶಸ್ಥರು ಅಣ್ಣೀಗೆರೆ ವಂಶಸ್ಥರು ಹಾಗೂ ಬಂಧು ಮಿತ್ರರು. ಮೊ: 98806 02405, 74116 76985

ವಿ.ಸೂ: ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಲು ವಿನಂತಿ.

**ಹೃದಯಪೂರ್ವಕ ಅಭಿನಂದನೆಗಳು**

ಬೆಂಗಳೂರಿನ ರಾಜೀವ್‌ಗಾಂಧಿ ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿ ನಾಲ್ಕನೇ ಬಾರಿಗೆ ಚುನಾಯಿತಗೊಂಡಿರುವ ಪ್ರತಿಷ್ಠಿತ ಬಾಪೂಜಿ ವಿದ್ಯಾಸಂಸ್ಥೆಯ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಕಣ್ಣಿನ ವಿಭಾಗದ ಮುಖ್ಯಸ್ಥರು, ಹಿರಿಯ ನೇತ್ರ ತಜ್ಞರು ಹಾಗೂ ನಮ್ಮ ಕುಟುಂಬದವರು ಆಗಿರುವ **ಡಾ|| ರವೀಂದ್ರ ಬಣಕಾರ್** ಅವರಿಗೆ ಸಹಕರಿಸಿದ ಎಲ್ಲರಿಗು ಹೃದಯಪೂರ್ವಕ ಅಭಿನಂದನೆಗಳು.





ಶುಭ ಕೋರುವವರು
ಶ್ರೀಮತಿ ವನಜಾಕ್ಷಿ ಮತ್ತು ಶ್ರೀ ಮಲ್ಲೇಶಪ್ಪ ನಾಗಪ್ಪ ಛತ್ರದ,
ಶ್ರೀಮತಿ ಪ್ರತಿಭಾ ಮತ್ತು ಶ್ರೀ ರಾಕೇಶ್ ಎಂ. ಛತ್ರದ, M.Tech, Mascut
ಶ್ರೀಮತಿ ಅಭಿಲಾಷ ಮತ್ತು ಶ್ರೀ ವಿಕಾಸ್ ಎಂ. ಛತ್ರದ B.E. M.S (USA)
ಹಾಗೂ ಬ್ಯಾಡಗಿ ಬಂಧುಗಳು

**ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು**

ವೈವಾಹಿಕ ಜೀವನದ ರಜತ ಮಹೋತ್ಸವ ಸಂಭ್ರಮವನ್ನು ಆಚರಿಸಿಕೊಳ್ಳುತ್ತಿರುವ ನಮ್ಮ ಅತ್ಯಂತ ನೆಚ್ಚಿನ ಹಾಗೂ ಆತ್ಮೀಯ ಸ್ನೇಹಿತರಾದ **ಶ್ರೀ ಎಸ್.ಪಿ. ಶ್ರೀಧರ್ ಹಾಗೂ ಶ್ರೀಮತಿ ನಿರ್ಮಲ** ಇವರಿಗೆ 25ನೇ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು

25th ANNIVERSARY





- ಶ್ರೀಮತಿ ಮಂಜುಳ ಹಾಗೂ ಶ್ರೀ ಗಿರೀಶ್ ಎಸ್. ವಿ. ದಾವಣಗೆರೆ
- ಶ್ರೀಮತಿ ಅನು ಹಾಗೂ ಶ್ರೀ ಆನಂದ ಆರ್. ಬೆಂಗಳೂರು.
- ಶ್ರೀಮತಿ ವಿದ್ಯಾ ಹಾಗೂ ಶ್ರೀ ಚನ್ನೇಶ್ ರಾಜು ಪಿ.ಎಚ್. ಮಂಗಳೂರು.
- ಶ್ರೀಮತಿ ಅಶ್ವಿನಿ ಹಾಗೂ ಶ್ರೀ ಶಿವಕುಮಾರ್ ಎಚ್. ಬಿ. ಬೆಂಗಳೂರು
- ಶ್ರೀಮತಿ ನೈನ ರಾಣಿ ಹಾಗೂ ಶ್ರೀ ವಿಶ್ವನಾಥಯ್ಯ ಎಚ್. ವಿ. ಬೆಂಗಳೂರು.
- ಶ್ರೀಮತಿ ಆಶಾ ಹಾಗೂ ಶ್ರೀ ಕಿರಣ್ ಎಚ್. ಎಮ್. ಬೆಂಗಳೂರು.
- ಶ್ರೀಮತಿ ಅನಿತ ಹಾಗೂ ಶ್ರೀ ಮಧು ಎಸ್. ಬೆಂಗಳೂರು.
- ಶ್ರೀಮತಿ ಶೋಭ ಹಾಗೂ ಶ್ರೀ ಮಹಲಿಂಗಯ್ಯ ಎಚ್. ಎಮ್. ಬೆಂಗಳೂರು.
- ಶ್ರೀಮತಿ ರೂಪ ಹಾಗೂ ಶ್ರೀ ಪ್ರಕಾಶ್ ಕೆ. ಬೆಂಗಳೂರು.
- ಶ್ರೀಮತಿ ಚಂದ್ರಿಕ ಹಾಗೂ ಶ್ರೀ ಸಂಜಯ್ ಬಿ. ಬೆಂಗಳೂರು.
- ಶ್ರೀಮತಿ ಅಶ್ವಿನಿ ಹಾಗೂ ಶ್ರೀ ವಾಗೀಶ್ ಪಾಟೀಲ್, ಸಿಂಗಪುರ್.
- ಶ್ರೀಮತಿ ಸಾವಿತ್ರಿ ಹಾಗೂ ಶ್ರೀ ವೀರೇಂದ್ರ ಕೆ. ಬೆಂಗಳೂರು.
- ಶ್ರೀಮತಿ ಗಾಯತ್ರಿ ಹಾಗೂ ಶ್ರೀಯತಿರಾಜ್ ಎಚ್. ಕೆ. ಬೆಂಗಳೂರು.
- ಶ್ರೀಮತಿ ಸಪ್ನ ಹಾಗೂ ಶ್ರೀ ಪ್ರಕಾಶ್ ವಿ. ಡಿ., ಯು.ಎಸ್.ಎ
- ಶ್ರೀಮತಿ ವಿದ್ಯಾ ಹಾಗೂ ಶ್ರೀ ಧನಂಜಯ ವಿ.ಜೆ ಯು.ಎಸ್.ಎ
- ಶ್ರೀಮತಿ ಮಧು ಹಾಗೂ ಶ್ರೀ ತೇಜಸ್ವಿ ಪಾಟೀಲ್, ಯು.ಎಸ್.ಎ


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte